RNI: KARKAN\2019\78042



ಸಂಪಾದಕರು : ಸಿ.ಎನ್.ಸಮಗಂಡಿ.

# ಸತ್ಯಮಿಥ್ಯ

ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

Satyamithi Kannada Daily Morning

ಚನ್ನು ಮೆನ್ಸ್‌ವೇರ್
ಕೊಳ್ಳಿಯವರ ಕ್ರಾಸ್.
ಚನ್ನು ಸ್ಟಿಚ್‌ವರ್ಲ್ಡ್
ಬಿ.ಎಸ್.ಎನ್.ಎಲ್. ಆಫೀಸ್ ಹತ್ತಿರ,
ಜೇಂಟ್ಸ್ ಸ್ಪೇಶಲಿಸ್ಟ್ ಟೇಲರ್
ಗಜೇಂದ್ರಗಡ-582114.
ಸೆಲ್ : 9986982482, 9686165708

ಅನುದಾನ ಬಾರದಿದ್ದಕ್ಕೆ ಆತ್ಮಹತ್ಯೆ ಪತ್ರ ಬರೆದಿಟ್ಟು ಕೆಆರ್‌ಐಡಿಎಲ್ ಎಇಇ ನಾಪತ್ತೆ! 2

ಸಂತ-ಶರಣರ ತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಿ: ಸ.ಸ. ಪ್ರಭುಜಿ ಮಹಾರಾಜರು 3

ಹಬ್ಬದ ಸಡಗರದಲ್ಲಿ ಮರೆಯಾಗುವ ಖಾಕಿಯ ಮೌನದ ಕಣ್ಣೀರು 4

ಸಂಪುಟ(Volume): 1 ಸಂಚಿಕೆ (Issue): 77 ● ಪುಟ (Page): 4 ● ದರ: Rs. 4 ಭಾನುವಾರ 27 ಸೆಪ್ಟೆಂಬರ್ 2026 ● 27 SEPTEMBER 2026 ● ಧಾರವಾಡ ● ಹಾವೇರಿ ● ಗದಗ ● ಕೊಪ್ಪಳ ● ವಿಜಯನಗರ ● ರಾಯಚೂರು ● ವಿಜಯಪುರ ● ಬಾಗಲಕೋಟೆ

## ಹಾಲಿನ ದರ ಏರಿಕೆ ಸುಳಿವು ನೀಡಿದ ಡಿಕೆಶಿ



**ಬೆಂಗಳೂರು:** ರೈತರಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ಹಾಲಿನ ದರ ಏರಿಕೆ ಮಾಡಬೇಕು ಎಂಬ ಬೇಡಿಕೆ ಇದೆ. ಈ ಬಗ್ಗೆ ಸಿಎಂ ಡಿಕೆ ಶಿವಕುಮಾರ್ ಕೂಡಾ ಪ್ರತಿಕ್ರಿಯೆ ನೀಡಿದ್ದಾರೆ. ಜಿಲ್ಲಾ ಹಾಲು ಒಕ್ಕೂಟಗಳ ಅಧ್ಯಕ್ಷರು ನನ್ನನ್ನು ಭೇಟಿಯಾಗಿ 12ರೂ. ಹೆಚ್ಚಳ ಮಾಡಿ ಎಂದು ಮನವಿ ಮಾಡಿದ್ದಾರೆ. ಆದರೆ ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಿಎಂ ತಿಳಿಸಿದ್ದಾರೆ.

ಹಾಲಿನ ದರ ಏರಿಕೆ ವಿಚಾರವಾಗಿ ಕೇಳಿದ ಪ್ರಶ್ನೆಗೆ,'ಜಿಲ್ಲಾ ಹಾಲು ಒಕ್ಕೂಟಗಳ ಅಧ್ಯಕ್ಷರು ನನ್ನನ್ನು ಭೇಟಿಯಾಗಿ 12ರೂ. ಹೆಚ್ಚಳ ಮಾಡಿ. ಅದರಲ್ಲಿ 2 ರೂ. ಸಂಘಗಳಿಗೆ ಕೊಡಿ ಎಂದು ಮನವಿ ಮಾಡಿದ್ದಾರೆ. ನೆರೆಯ ರಾಜ್ಯಗಳಾದ ತೆಲಂಗಾಣ, ತಮಿಳುನಾಡು, ಆಂಧ್ರ ಪ್ರದೇಶಗಳಲ್ಲಿನ ಪರಿಸ್ಥಿತಿಯ ಬಗ್ಗೆ ವರದಿಗಳನ್ನು ಪಡೆದು, ಪರಿಶೀಲಿಸಿದ ನಂತರ ಮುಂದಿನ ತೀರ್ಮಾನ ಮಾಡುತ್ತೇವೆ' ಎಂದು ಹೇಳಿದರು.

'ಹಾಲಿನ ಪ್ರಸ್ತುತ ದರದಿಂದ ಸಂಘಗಳಿಗೆ ನಷ್ಟವಾಗುತ್ತಿದೆ. ಬೆಲೆ ವಿಚಾರದಲ್ಲಿ ರೈತರಲ್ಲಿ ಆಕ್ರೋಶವಿದೆ. 50 ಸಾವಿರ ಹಾಲು ಉತ್ಪಾದಕರು ಹಾಲಿನ ದರ ಏರಿಕೆಗೆ ಆಗ್ರಹಿಸಿದ್ದಾರೆ. ರೈತರನ್ನು ಹಾಗೂ ಒಕ್ಕೂಟಗಳನ್ನು ರಕ್ಷಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಿದ್ದೇವೆ' ಎಂದರು.

**ಪರಿಷತ್ ನಲ್ಲಿ ನಡೆದಿದ್ದ ಚರ್ಚೆ:** ಹಾಲಿನ ದರ ಏರಿಕೆಯ ಕುರಿತಾಗಿ ವಿಧಾನಪರಿಷತ್‌ನಲ್ಲಿ ಚರ್ಚೆ ನಡೆದಿತ್ತು. ಕಾಂಗ್ರೆಸ್ ಸದಸ್ಯ ಎಸ್ ರವಿ ಅವರು ಹಾಲಿನ ದರ ಏರಿಕೆ ಮಾಡುವಂತೆ ಮನವಿ ಮಾಡಿದ್ದರು. ರೈತರಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ಹಾಲಿನ ದರವನ್ನು 12 ರಷ್ಟು ಏರಿಕೆ ಮಾಡಲು ಮನವಿ ಮಾಡಲಾಗಿತ್ತು.

ಅಲ್ಲದೆ ಇದೇ ಸಂದರ್ಭದಲ್ಲಿ ಎಚ್‌ಡಿ ಕುಮಾರಸ್ವಾಮಿ ಅವರ ಬೆಂಬಲವೂ ಬೇಕು ಎಂಬ ಅರ್ಥದಲ್ಲಿ ಎಸ್ ರವಿ ಜೆಡಿಎಸ್ ಸದಸ್ಯರಲ್ಲೂ ಮನವಿ ಮಾಡಿಕೊಂಡಿದ್ದರು. ರೈತರಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದರು.

ಈ ನಡುವೆ ಸಿಎಂ ಡಿಕೆ ಶಿವಕುಮಾರ್ ಅವರು ಹಾಲಿನ ದರ ಏರಿಕೆ ಮಾಡುವ ಬಗ್ಗೆ ಸುಳಿವು ನೀಡಿದ್ದಾರೆ. ದರ ಏರಿಕೆ ಆದರೆ ರೈತರಿಗೆ ಇದರಿಂದ ಅನುಕೂಲ ಆಗಲಿದೆ. ಆದರೆ, ಗ್ರಾಹಕರ ಮೇಲೆ ಮತ್ತಷ್ಟು ಬರೆ ಬೀಳಲಿದೆ. ಆದರೆ ರೈತರಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ದರ ಏರಿಕೆ ಮಾಡಬೇಕು ಎಂಬ ಮನವಿಯನ್ನು ಎಸ್ ರವಿ ಅವರು ಮಾಡಿದ್ದಾರೆ. ಹಾಗಾಗಿ ಸರ್ಕಾರ ನಿರ್ಧಾರ ಏನು ಎಂಬುವುದು ಸದ್ಯಕ್ಕೆ ಕುತೂಹಲ.





## ನಮ್ಮ ನಿರ್ಧಾರಗಳಲ್ಲಿ ಭಿನ್ನಾಭಿಪ್ರಾಯವಿಲ್ಲ

### ಪೂರ್ಣ ಪ್ರಮಾಣದ ಸಭೆ ನಡೆಸಿದ ಆಯೋಗ ಸ್ಪಷ್ಟನೆ





**ದೆಹಲಿ:** ಚುನಾವಣಾ ಆಯೋಗದ (EC) ಆಂತರಿಕ ನಿರ್ಧಾರಗಳಲ್ಲಿ ಭಿನ್ನಾಭಿಪ್ರಾಯಗಳಿವೆ ಎಂಬ ವರದಿಗಳನ್ನು ಭಾರತೀಯ ಚುನಾವಣಾ ಆಯೋಗ ಸಂಪೂರ್ಣವಾಗಿ ತಳ್ಳಿಹಾಕಿದೆ. ಶನಿವಾರ ಪೂರ್ಣ ಪ್ರಮಾಣದ ಸಭೆ ನಡೆಸಿದ ಆಯೋಗ, ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (SIR) ಸೇರಿದಂತೆ ಎಲ್ಲಾ ಪ್ರಮುಖ ನಿರ್ಧಾರಗಳನ್ನು ಸರ್ವಸಮ್ಮತಿಯಿಂದ ತೆಗೆದುಕೊಳ್ಳಲಾಗಿದೆ ಎಂದು ಸ್ಪಷ್ಟನೆ ನೀಡಿದೆ.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ಚುನಾವಣಾ ಆಯುಕ್ತರಾದ ಸುಖ್‌ಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಶನಿವಾರ ಮಧ್ಯಾಹ್ನ ಹೊಸದಿಲ್ಲಿಯ ನಿರ್ವಾಚನ ಸದನದಲ್ಲಿ ಸಭೆ ನಡೆಸಿದರು. ಆಯುಕ್ತರ ನಡುವೆಗಂಭೀರ ಭಿನ್ನಾಭಿಪ್ರಾಯಗಳಿವೆಯೆಂಬ ಮಾಧ್ಯಮ ವರದಿಗಳ ಬೆನ್ನಲ್ಲೇ ಈ ಸಭೆ ನಡೆದಿದ್ದು, ಮೂವರೂ ಒಟ್ಟಿಗೆ ಭಾಗವಹಿಸಿದ ಫೋಟೋವನ್ನು ಆಯೋಗ ಬಿಡುಗಡೆ ಮಾಡಿದೆ.

**ಆಯೋಗ ನೀಡಿದ ಪ್ರಮುಖ ಸ್ಪಷ್ಟನೆಗಳಿವು:** ಫಾರ್ಮ್ 6 ವಿವಾದ: ಮತದಾರರ ನೋಂದಣಿ ಫಾರ್ಮ್ 6 ರಲ್ಲಿನ ಪೋಷಕರ ಹೆಸರಿನ ಮ್ಯಾಪಿಂಗ್ ಕುರಿತು ಎದ್ದಿದ್ದ ಪ್ರಶ್ನೆಗೆ ಉತ್ತರಿಸಿದ ಆಯೋಗ, ಈ ಪ್ರಕ್ರಿಯೆಯನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. 'ಖಖಖ' ಅವಧಿಯನ್ನು ಹೊರತುಪಡಿಸಿ, ಸಾಮಾನ್ಯ ದಿನಗಳಲ್ಲಿ 1960 ರ ನಿಯಮಗಳ ಪ್ರಕಾರವೇ ಫಾರ್ಮ್‌ಗಳನ್ನು ಸ್ವೀಕರಿಸಲಾಗುತ್ತದೆ ಎಂದು ಹೇಳಿದೆ.

**ECINET ಪೋರ್ಟಲ್ ಪರಾಮರ್ಶೆ:** ತಂತ್ರಜ್ಞಾನ ವ್ಯವಸ್ಥೆ ಮತ್ತು ದತ್ತಾಂಶ ಲಭ್ಯತೆಯ ಮೇಲಿನ ಆತಂಕಗಳಿಗೆ ಸ್ಪಂದಿಸಿರುವ ಆಯೋಗ, ಐಐಟಿ ಅಥವಾ ಐಐಐಟಿ ಸ್ವತಂತ್ರ ತಜ್ಞರನ್ನು ಒಳಗೊಂಡ ಹಿರಿಯ ಉಪ ಚುನಾವಣಾ ಆಯುಕ್ತರ ಸಮಿತಿಯಿಂದ 'ECI-NET' ವ್ಯವಸ್ಥೆಯನ್ನು ಪರಾಮರ್ಶೆಗೆ ಒಳಪಡಿಸಲು ನಿರ್ಧರಿಸಿದೆ.

ಕ್ಯಾಬಿನೆಟ್ ಕಾರ್ಯದರ್ಶಿಗೆ ಪತ್ರದ ವಿಚಾರ: ಅಧಿಕಾರಿಯೊಬ್ಬರ ನಿಯೋಜನೆ ಮತ್ತು ಕೆಲಸದ ವಿಂಗಡಣೆಗೆ ಸಂಬಂಧಿಸಿದ ಪತ್ರವು ಯಾವುದೇ ನೀತಿ ನಿರೂಪಣೆಗೆ ಸಂಬಂಧಿಸಿದ್ದಲ್ಲ, ಬದಲಾಗಿ ಅಧಿಕಾರಿಯ ಕಾರ್ಯಾಚರಣೆಗೆ ಸಂಬಂಧಿಸಿದ್ದಾಗಿತ್ತು. ಆಯುಕ್ತರ ಸೂಚನೆಯಂತೆ ಆ ಆದೇಶವನ್ನು ಜಾರಿಗೆ ತಂದಿರಲಿಲ್ಲ ಎಂದು ಸ್ಪಷ್ಟಪಡಿಸಿದೆ.

**SIR ಆದೇಶಕ್ಕೆ ಸುಪ್ರೀಂ ಸಮ್ಮತಿ:** ಜೂನ್ 24, 2025 ರಂದು ದೇಶಾದ್ಯಂತ 'SIR' ಪ್ರಕ್ರಿಯೆಗೆ ಚಾಲನೆ ನೀಡಿದ ಆದೇಶವನ್ನು ಆಯೋಗದ ಎಲ್ಲಾ ಸದಸ್ಯರ ಸರ್ವಸಮ್ಮತಿಯಿಂದ ಹೊರಡಿಸಲಾಗಿತ್ತು. ಇದನ್ನು ಸುಪ್ರೀಂ ಕೋರ್ಟ್ ಕೂಡ ಎತ್ತಿಹಿಡಿದಿದೆ.

**ಕಾರ್ಯವೈಖರಿ ಬಲವರ್ಧನೆಗೆ ಹೊಸ ಕ್ರಮ:** ಇನ್ನು ಮುಂದೆ ಆಯೋಗದ ಪ್ರತಿಯೊಂದು ಸಭೆಯ ಕಾರ್ಯಸೂಚಿಯನ್ನು ಮುಂಚಿತವಾಗಿಯೇ ವಿತರಿಸಲಾಗುವುದು ಮತ್ತು ಸಭೆಯ ನಡಾವಳಿಗಳನ್ನು ಕಡ್ಡಾಯವಾಗಿ ದಾಖಲಿಸಲಾಗುವುದು. ಆಯುಕ್ತರು ನೀಡುವ ನಿರ್ದೇಶನಗಳನ್ನು ಅಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಸೂಚಿಸಲಾಗಿದೆ.

### ಅರ್ಜಿ ಸಲ್ಲಿಕೆ ಗಡುವು ವಿಸ್ತರಣೆ

**ದೆಹಲಿಯಲ್ಲಿ 'SIR' ಪ್ರಕ್ರಿಯೆಯಡಿ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸುವ ಗಡುವನ್ನು ಅಕ್ಟೋಬರ್ 30 ರವರೆಗೆ ಹಾಗೂ ಮಹಾರಾಷ್ಟ್ರದಲ್ಲಿ ಅಕ್ಟೋಬರ್ 12 ರವರೆಗೆ ವಿಸ್ತರಿಸಲಾಗಿದೆ. ಆಂತರಿಕ ಭಿನ್ನಾಭಿಪ್ರಾಯಗಳ ನೆಪದಲ್ಲಿ ಪ್ರತಿಪಕ್ಷಗಳು ಮುಖ್ಯ ಚುನಾವಣಾ ಆಯುಕ್ತರ ರಾಜೀನಾಮೆಗೆ ಆಗ್ರಹಿಸುತ್ತಿದ್ದು, ರಾಜಕೀಯ ವಾಗ್ದಾಳಿ ತೀವ್ರಗೊಂಡಿದೆ. ಆದರೆ ಆಯೋಗವು ತನ್ನ ಎಲ್ಲಾ ನಿರ್ಧಾರಗಳು ಕಾಯ್ದೆ ಮತ್ತು ಪ್ರಜಾಪ್ರಭುತ್ವದ ಆಶಯಕ್ಕೆ ತಕ್ಕಂತೆ ಒಮ್ಮತದಿಂದಲೇ ತೆಗೆದುಕೊಂಡಿದ್ದಾಗಿ ಸಮರ್ಥಿಸಿಕೊಂಡಿದೆ. ಚುನಾವಣೆ ಆಯೋಗದ ವಿರುದ್ಧ ವಿಪಕ್ಷ ಕಾಂಗ್ರೆಸ್ ಸೇರಿದಂತೆ ಅನೇಕ ರಾಜಕೀಯ ಪಕ್ಷಗಳು ಧ್ವನಿಯೆತ್ತಿದ್ದವು. ಇನ್ನು ಕಾಕ್ರೋಚ್ ಜನತಾ ಪಾರ್ಟಿ ಅಂತೂ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡದಿದ್ದರೆ ಹೋರಾಟ ನಡೆಸುವುದಾಗಿ ಎಚ್ಚರಿಕ ನೀಡಿತ್ತು.**

## ಕೆಎಎಸ್ ಅಭ್ಯರ್ಥಿ ಮಮಿತಾ ಜಾಮೀನು ಅರ್ಜಿ ವಜಾ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ)ದಲ್ಲಿ ನಡೆದಿರುವ ಪರೀಕ್ಷಾ ಹಗರಣದ ಕುರಿತು ಕೆಎಎಸ್ ಅಭ್ಯರ್ಥಿ ಮಮಿತಾ ಅವರು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ನಗರದ 52ನೇ ಸೇಷನ್ಸ್ ಕೋರ್ಟ್ ವಜಾಗೊಳಿಸಿ ಗುರುವಾರ ಆದೇಶ ಹೊರಡಿಸಿದೆ.

ಕೆಪಿಎಸ್‌ಸಿ ಸದಸ್ಯೆ ಶಾಂತಾ ಹೊಸಮನಿ ಅವರೊಂದಿಗೆ ನೇಮಕಾತಿ ವಿಚಾರವಾಗಿ ಹಣ ನೀಡಿದ್ದಾರೆ ಎಂಬ ಆರೋಪದ ಮೇರೆಗೆ ದಾಖಲಾಗಿದ್ದ ಪ್ರಕರಣದಲ್ಲಿ ಮಮಿತಾ ಜಾಮೀನು ಅರ್ಜಿ ಸಲ್ಲಿಸಿದರು. ಅರ್ಜಿ ವಿಚಾರಣೆ ನಡೆಸಿದ ಕೋರ್ಟ್ ವಾದ–ಪ್ರತಿವಾದ ಆಲಿಸಿ ಅರ್ಜಿಯನ್ನು ವಜಾಗೊಳಿಸಿದೆ. 2023–24ನೇ ಸಾಲಿನಲ್ಲಿ ಆಯೋಗವು ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಪರೀಕ್ಷೆ ಕೈಗೊಂಡಿತ್ತು. ಈ ವೇಳೆ ಶಾಂತಾ ಹೊಸಮನಿ ಅವರೊಂದಿಗೆ ನೇಮಕಾತಿ ವಿಚಾರವಾಗಿ ನಿರಂತರ ಸಂಪರ್ಕ ಹೊಂದಿದ್ದ ಕೆಎಎಸ್ ಅಭ್ಯರ್ಥಿ ಮಮಿತಾ, ಲಕ್ಷಾಂತರ ರೂ.ನೀಡಿದ್ದಾರೆ ಎಂದು ಆರೋಪಿಸಿ ವಿಧಾನಸೌಧ ಠಾಣೆಯಲ್ಲಿ ವಿದ್ಯಾರ್ಥಿ ಸಂಘಟನೆ ಮುಖಂಡರೊಬ್ಬರು ಪ್ರಕರಣ ದಾಖಲಿಸಿದ್ದರು. ಇದರ ಬಗ್ಗೆ ತನಿಖೆ ನಡೆಸಿದ ಸಿಐಡಿ ಅಧಿಕಾರಿಗಳು, ಆರೋಪಿ ಶಾಂತಾ ಹೊಸಮನಿ, ಮಮಿತಾಳೊಂದಿಗೆ ಹಲವು ಬಾರಿ ಫೋನ್ ಕರೆ ಮಾಡಿರುವುದನ್ನು ಪತ್ತೆ ಮಾಡಿತ್ತು. ಬಂಧನ ಭೀತಿ ಎದುರಿಸುತ್ತಿದ್ದ ಮಮಿತಾ ನ್ಯಾಯಾಲಯಕ್ಕೆ ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಿದ್ದರು.

**ಕೆಎಎಸ್ ನೇಮಕಾತಿಯಲ್ಲೂ ಭ್ರಷ್ಟಾಚಾರ:** ಪಶುವೈದ್ಯಾಧಿಕಾರಿ 400 ಹುದ್ದೆಗಳ ನೇಮಕಾತಿ ಹಗರಣದ ಜತೆಗೆ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಪರೀಕ್ಷೆಯಲ್ಲೂ ದೊಡ್ಡ ಮಟ್ಟದ ಭ್ರಷ್ಟಾಚಾರ ನಡೆದಿದೆ. ಈಗಾಗಲೇ ಸರಣಿ ಹಗರಣಗಳ ಆರೋಪ ಹೊತ್ತಿರುವ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಇ.ಡಿ ಕಸ್ಟಡಿಯಲ್ಲಿ ಇದ್ದಾರೆ. ಮಧ್ಯವರ್ತಿ ಬಸವರಾಜ್ ಕನ್ನಾಳೆ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾರೆ. ಈ ಇಬ್ಬರು ಸೇರಿಕೊಂಡು ಪಶುವೈದ್ಯಾಧಿಕಾರಿಗಳ ನೇಮಕಾತಿ ಸೇರಿ ಹಲವು ನೇಮಕಾತಿಯಲ್ಲಿ ಅಕ್ರಮ ಎಸಗಿರುವುದು ಒಂದೊಂದಾಗಿ ಬೆಯಲಿಗೆ ಬರುತ್ತಿವೆ.







ಸತ್ಯ ಮಿಥ್ಯ
ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

SATYA MITHI
Kannada Daily Morning

# ವಿದ್ಯಾಭೂಷಣ ರಾಷ್ಟ್ರೀಯ ಪ್ರಶಸ್ತಿಗೆ ಶಿಕ್ಷಕ ಎಸ್. ವೈ. ಭಗವಂತಗೌಡ್ರು ಭಾಜನ

**ಸತ್ಯಮಿಥ್ಯ ಸುದ್ದಿಮೂಲ ಅಣ್ಣಿಗೇರಿ:**
ಶಿಕ್ಷಣ ಕ್ಷೇತ್ರದ ಸೌಂದರ್ಯವಿರುವುದೇ ಒಬ್ಬ ಶಿಕ್ಷಕ ವಿದ್ಯಾರ್ಥಿಯ ಬದುಕನ್ನು ಹೇಗೆ ರೂಪಿಸುತ್ತಾನೆ ಎಂಬುದರಲ್ಲಿ. ಜ್ಞಾನದೀವಿಗೆಯನ್ನು ಬೆಳಗಿ, ಸಾವಿರಾರು ವಿದ್ಯಾರ್ಥಿಗಳ ಭವಿಷ್ಯಕ್ಕೆ ದಾರಿದೀಪವಾಗಿ ಅಪಾರ ಸೇವೆ ಸಲ್ಲಿಸುತ್ತಿರುವ ಅಣ್ಣಿಗೇರಿ ನಗರದ ಶ್ರೀ ಅಮೃತೇಶ್ವರ ಹೈಸ್ಕೂಲ್‌ನ ನಿಷ್ಠಾವಂತ ಶಿಕ್ಷಕರಾದ ಶ್ರೀ ಎಸ್. ವೈ. ಭಗವಂತಗೌಡ್ರು ಅವರಿಗೆ ಮತ್ತೊಂದು ಗೌರವ ಲಭಿಸಿದೆ. ಕಾವ್ಯಶ್ರೀ ಚಾರಿಟೇಬಲ್ ಟ್ರಸ್ಟ್ (ರಿ.) ಕರ್ನಾಟಕ ವತಿಯಿಂದ ನೀಡಲಾಗುವ ಪ್ರತಿಷ್ಠಿತ 'ವಿದ್ಯಾಭೂಷಣ ರಾಷ್ಟ್ರೀಯ ಪ್ರಶಸ್ತಿ' ಗೆ ಇವರು ಭಾಜನರಾಗಿದ್ದಾರೆ.




ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಅನನ್ಯ ಸೇವೆ, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ನೀಡಿದ ನಿರಂತರ ಕೊಡುಗೆ ಹಾಗೂ ಅವರ ಶೈಕ್ಷಣಿಕ ಸಾಧನೆಯನ್ನು ಗುರುತಿಸಿ ಈ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ. ತರಗತಿಯ ಬೋಧನೆಗೆ ಮಾತ್ರ ಸೀಮಿತವಾಗದೆ, ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯ, ಶಿಸ್ತು ಮತ್ತು ಅಧ್ಯಯನ ಆಸಕ್ತಿಯನ್ನು ಮೂಡಿಸುವಲ್ಲಿ ಭಗವಂತಗೌಡ್ರು ಅವರ ಪಾತ್ರ ಹಿರಿದಾಗಿದೆ.

ಧಾರವಾಡದ ರಾಜ್ಯ ಸರ್ಕಾರಿ ನೌಕರರ ಭವನದಲ್ಲಿ ಬೆಳಿಗ್ಗೆ 10 ಗಂಟೆಗೆ ಆಯೋಜಿಸಲಾಗಿರುವ 'ಕಾವ್ಯಶ್ರೀ ಶಿಕ್ಷಕ ಸಾಹಿತ್ಯ ಸಮ್ಮೇಳನ 2026'ರ ಭವ್ಯ ಸಮಾರಂಭದಲ್ಲಿ ಶ್ರೀ ಎಸ್. ವೈ. ಭಗವಂತಗೌಡ್ರು ಅವರಿಗೆ ಪ್ರಶಸ್ತಿ ಪತ್ರ ಹಾಗೂ ಗೌರವವನ್ನು ಪ್ರದಾನ ಮಾಡಲಾಗುವುದು.

ಎಸ್. ವೈ. ಭಗವಂತಗೌಡ್ರು ಅವರಿಗೆ ರಾಷ್ಟ್ರೀಯ ಮಟ್ಟದ ಗೌರವ ಲಭಿಸಿರುವ ಸುದ್ದಿ ತಿಳಿಯುತ್ತಿದ್ದಂತೆ ಅಣ್ಣಿಗೇರಿ ತಾಲೂಕಿನಲ್ಲಿ ಸಂಭ್ರಮದ ವಾತಾವರಣ ಮೂಡಿದೆ. ಶ್ರೀ ಅಮೃತೇಶ್ವರ ಹೈಸ್ಕೂಲ್‌ನ ಆಡಳಿತ ಮಂಡಳಿ, ಸಹಪಾಠಿ ಶಿಕ್ಷಕ ವೃಂದ, ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಹಾಗೂ ಅಣ್ಣಿಗೇರಿ ತಾಲೂಕಿನ ಸಮಸ್ತ ಶಿಕ್ಷಕ ಬಳಗವು ಗೌಡ್ರವರ ಈ ಸಾಧನೆಗೆ ಹರ್ಷ ವ್ಯಕ್ತಪಡಿಸಿ, ಹೃದಯಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಒಬ್ಬ ಸಮರ್ಪಿತ ಶಿಕ್ಷಕನಿಗೆ ಸಿಗುವ ಇಂತಹ ಪ್ರಶಸ್ತಿಗಳು ಕೇವಲ ವ್ಯಕ್ತಿಗೆ ಸಿಗುವ ಗೌರವವಲ್ಲ, ಬದಲಿಗೆ ಇಡೀ ಶಿಕ್ಷಕ ವೃಂದಕ್ಕೇ ತರುವ ಹೆಮ್ಮೆಯಾಗಿದೆ.

# ಅನುದಾನ ಬಾರದಿದ್ದಕ್ಕೆ ಆತ್ಮಹತ್ಯೆ ಪತ್ರ ಬರೆದಿಟ್ಟು ಕೆಆರ್‌ಐಡಿಎಲ್ ಎಇಇ ನಾಪತ್ತೆ!

**ಸತ್ಯಮಿಥ್ಯ ಸುದ್ದಿಮೂಲ ಗದಗ :**
ಸರ್ಕಾರದ ಅನುದಾನ ಬಿಡುಗಡೆಯಾಗದಿದ್ದಕ್ಕೆ ನೊಂದು, ಸಬ್ ಗುತ್ತಿಗೆದಾರರ ಕಿರುಕುಳ ತಾಳಲಾರದೆ ಕೆಆರ್‌ಐಡಿಎಲ್ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಫರ್ವೀಜ್ ಧಾರವಾಡ ಎಂಬುವವರು ಆತ್ಮಹತ್ಯೆ ಪತ್ರ ಬರೆದಿಟ್ಟು ನಾಪತ್ತೆಯಾಗಿರುವ ಘಟನೆ ನಡೆದಿದೆ.



ಸೆಪ್ಟೆಂಬರ್ 12ರಂದು ಬೆಂಗಳೂರಿನ ಕೆಆರ್‌ಐಡಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿರುವ ಫರ್ವೀಜ್, "ಕೋಟಿಗಟ್ಟಲೆ ಅನುದಾನ ಬಾರದ ಕಾರಣ ನಿತ್ಯ ಸಬ್ ಗುತ್ತಿಗೆದಾರರು ಮನೆ ಮುಂದೆ ಬಂದು ಕೂಗಾಟ ನಡೆಸುತ್ತಿದ್ದಾರೆ. ಫೋನ್ ಮಾಡಿ ಕಿರುಕುಳ ನೀಡುತ್ತಿದ್ದಾರೆ. ಇದರಿಂದ ನನ್ನ ಮಾನಸಿಕ ಆರೋಗ್ಯ ಸಂಪೂರ್ಣ ಹದಗೆಟ್ಟಿದೆ. ಪರಿಸ್ಥಿತಿ ನಿಭಾಯಿಸಲು ಸಾಧ್ಯವಾಗದೆ ಜೀವನ ಕೊನೆಗಾಣಿಸುತ್ತಿದ್ದೇನೆ. ನನ್ನ ಸಾವಿಗೆ ನಾನೇ ಕಾರಣ. ಉಪವಿಭಾಗಕ್ಕೆ ಅನುದಾನ ನೀಡಿ ಸಮಸ್ಯೆ ಬಗೆಹರಿಸಿ, ದಯವಿಟ್ಟು ನನ್ನ ಕುಟುಂಬಕ್ಕೆ ಕಿರುಕುಳ ನೀಡಬೇಡಿ" ಎಂದು ಉಲ್ಲೇಖಿಸಿದ್ದಾರೆ.

ಸೆಪ್ಟೆಂಬರ್ 13ರಂದು ಬೆಂಗಳೂರಿನಲ್ಲಿ ಸಭೆ ಇದೆ ಎಂದು ಹೊರಟಿದ್ದ ಫರ್ವೀಜ್, ಪತ್ನಿ ಸೆಗುಪ್ತಾರಿಗೆ ಕರೆ ಮಾಡಿ ಬೆಂಗಳೂರು ತಲುಪಿರುವುದಾಗಿ ಹೇಳಿದ್ದರು. ನಂತರ ಗಂಡನ ಫೋನ್ ಸ್ವಿಚ್ ಆಫ್ ಆಗಿದ್ದರಿಂದ ಗಾಬರಿಗೊಳಗಾದ ಪತ್ನಿ, ಅತ್ತೆ ಮಾವನಿಗೆ ವಿಷಯ ತಿಳಿಸಿದ್ದರು. ಮಗನ ಕುರಿತು ವಿಚಾರಿಸಲು ಇಲಾಖೆಯ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಕರೆ ಮಾಡಿದಾಗ, ಫರ್ವೀಜ್ ಆಫೀಸಿಗೆ ಬಂದಿಲ್ಲವೆಂಬುದು ಕುಟುಂಬಸ್ಥರಿಗೆ ತಿಳಿದಿದೆ.

ಇದರಿಂದ ಆತಂಕಕ್ಕೊಳಗಾದ ಕುಟುಂಬಸ್ಥರು, ಗದಗ ಬೆಟಗೇರಿ ಬಡಾವಣೆ ಪೊಲೀಸ್ ಠಾಣೆಯಲ್ಲಿ ಸೆಪ್ಟೆಂಬರ್ 16ರಂದು ಪ್ರಕರಣ ದಾಖಲಿಸಿದ್ದಾರೆ. ವಿಶೇಷ ಪಡೆ ರಚಿಸಿ ಅಧಿಕಾರಿಯನ್ನು ಶೀಘ್ರವೇ ಪತ್ತೆ ಹಚ್ಚಬೇಕು ಮತ್ತು ಅವರಿಗೆ ಎದುರಾಗಿರುವ ಸಮಸ್ಯೆಯನ್ನು ಸರ್ಕಾರ ತಕ್ಷಣವೇ ಬಗೆಹರಿಸಬೇಕೆಂದು ಕಂಗಾಲಾಗಿರುವ ಕುಟುಂಬಸ್ಥರು ಮನವಿ ಮಾಡಿದ್ದಾರೆ. ಬೆಟಗೇರಿ ಬಡಾವಣೆ ಪೊಲೀಸರು ಪ್ರಕರಣದ ತನಿಖೆ ಚುರುಕುಗೊಳಿಸಿದ್ದಾರೆ.

# ಅ. 6ರಂದು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಪೂರ್ವಭಾವಿ ಸಭೆ

**ಹುಬ್ಬಳ್ಳಿ:** ಮಹರ್ಷಿ ವಾಲ್ಮೀಕಿ ರವರ ಜಯಂತಿಯನ್ನು ತಾಲ್ಲೂಕು ಮಟ್ಟದಲ್ಲಿ ಆಚರಿಸುವ ಕುರಿತು ಪ್ರತಿ ವರ್ಷದಂತೆ ಪ್ರಸಕ್ತ ವರ್ಷದಲ್ಲಿ ಪೂರ್ವಭಾವಿ ಸಿದ್ಧತಾ ಸಭೆಯನ್ನು ಅಕ್ಟೋಬರ್ 6 ರಂದು ಸಂಜೆ 4 ಗಂಟೆಗೆ ತಾಲೂಕು ಆಡಳಿತಸೌಧದ ತಾಲೂಕು ಪಂಚಾಯತ ಸಭಾಭವನದಲ್ಲಿ ಏರ್ಪಡಿಸಲಾಗಿದೆ.

ತಾಲ್ಲೂಕಿನ ವಿವಿಧ ದಲಿಪರ ಸಂಘ–ಸಂಸ್ಥೆಗಳ ಮುಖಂಡರು, ತಾಲ್ಲೂಕು ಮಟ್ಟದ ಅಧಿಕಾರಿಗಳು ಪೂರ್ವಭಾವಿ ಸಿದ್ಧತಾ ಸಭೆಗೆ ಹಾಜರಾಗಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗ್ರಾಮೀಣ ಭಾಗದಲ್ಲಿ ಜಿಲ್ಲಾಧಿಕಾರಿಗಳು, ಜಿ.ಪಂ ಸಿಇಓ ಸಂಚಾರ: ಬರ ಪರಿಸ್ಥಿತಿಯ ಅವಲೋಕನ

**ಸತ್ಯಮಿಥ್ಯ ಸುದ್ದಿಮೂಲ ಕೊಪ್ಪಳ :**
ಜಿಲ್ಲಾಧಿಕಾರಿಗಳಾದ ಡಾ. ಸುರೇಶ್ ಬಿ. ಹಿಟ್ನಾಳ್ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ವರ್ಣಿತ್ ನೇಗಿ ಅವರು ಸೆಪ್ಟೆಂಬರ್ 25ರಂದು ಗ್ರಾಮೀಣ ಭಾಗದಲ್ಲಿ ಪ್ರವಾಸ ಕೈಗೊಂಡು ಬರ ಪರಿಸ್ಥಿತಿಯ ಅವಲೋಕನೆ ಮಾಡಿದರು.

ಬೆಳಿಗ್ಗೆ 10.30ಕ್ಕೆ ಕನಕಗಿರಿ ತಾಲೂಕಿನ ಹುಲಿಹೈದರ್ ಹೋಬಳಿಯ ಹುಲಿಹೈದರ್ ಗ್ರಾಮದ ರೈತ ದೊಡ್ಡಬಸಪ್ಪ ಕನ್ನಾಳ ಅವರ ಜಮೀನಿಗೆ ಭೇಟಿ ನೀಡಿ, ಅಲ್ಲಿನ ತೆ–ೂಗರಿ ಬೆಳೆಯನ್ನು ಪರಿಶೀಲಿಸಿದರು. ಬಳಿಕ ಹನುಮನಾಳ ಗ್ರಾಮದ ರೈತ ಮೂಖಪ್ಪ ತಂದೆ ಕರಿಯಪ್ಪ ಅವರ ಹೊಲಕ್ಕೆ ತೆರಳಿ, ಸಜ್ಜೆ ಬೆಳೆಯ ವೀಕ್ಷಣೆ ಮಾಡಿದರು.



ನಂತರ ಕನಕಗಿರಿ ಹೋಬಳಿಯ ತಿಪ್ಪನಾಳ ಗ್ರಾಮದ ರೈತ ಯಮನೂರಪ್ಪ ಅವರ ಕೃಷಿ ಭೂಮಿಯಲ್ಲಿನ ತೊಗರಿ ಬೆಳೆಯನ್ನು ಪರಿಶೀಲಿಸಿದರು. ಬಳಿಕ ಸುಳೇಕಲ್ ಗ್ರಾಮದ ರೈತ ಕನಕಪ್ಪ ಅವರ ಹೊಲದಲ್ಲಿ ಸೂರ್ಯಕಾಂತಿ ಬೆಳೆ ವೀಕ್ಷಣೆ ನಡೆಸಿದರು.

ಇದೇ ವೇಳೆ ಜಿಲ್ಲಾಧಿಕಾರಿಗಳು ರೈತರೊಂದಿಗೆ ಮಾತನಾಡಿ, ಬರ ಪರಿಸ್ಥಿತಿಯಿಂದ ಎದುರಾಗುತ್ತಿರುವ ಸಮಸ್ಯೆಗಳ ಕುರಿತು ಮಾಹಿತಿ ಸಂಗ್ರಹಿಸಿದರು. ಬೆಳೆ ಹಾನಿಗೆ ಪರಿಹಾರ ಹಾಗೂ ಬೆಳೆ ವಿಮೆಗೆ ಸಂಬಂಧಿಸಿದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ನಂತರ ಕನಕಗಿರಿ ಹೋಬಳಿ ವ್ಯಾಪ್ತಿಯ ಕಲಕೇರಾ ಕೆ–ರೆಗೆ ಭೇಟಿ ನೀಡಿ, ವಿಬಿಜಿರಾಮ್ ಜೀ ಯೋಜನೆಯಡಿ ನಡೆಯುತ್ತಿರುವ ಕೆರೆ ಹೂಳೆತ್ತುವ ಕಾಮಗಾರಿಯ ವೀಕ್ಷಣೆ ಮಾಡಿ ಕೂಲಿಕಾರರಿಂದ ಮಾಹಿತಿಯನ್ನು ಪಡೆದರು.

ಈ ಸಂದರ್ಭದಲ್ಲಿ ಕೊಪ್ಪಳ ಜಂಟಿ ಕೃಷಿ ನಿರ್ದೇಶಕರಾದ ಜಿ.ಡಿ ಕೃಷ್ಣಮೂರ್ತಿ, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರಾದ ಕೃಷ್ಣ ಉಕ್ಕುಂದ, ಕನಕಗಿರಿ ತಹಶೀಲ್ದಾರರಾದ ಚಂದ್ರಶೇಖರ್ ಗಾಳಿ, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಾದ ಕೆ.ರಾಜಶೇಖರ್, ಸಹಾಯಕ ನಿರ್ದೇಶಕರಾದ ನಾಗೇಶ್ ಎಚ್. ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಹಾಗೂ ರೈತರು ಉಪಸ್ಥಿತರಿದ್ದರು.

# ಹಾಳುಬಿದ್ದ ಕಟ್ಟಡಕ್ಕೆ ಹೊಸ ಜೀವ ಹಿರಿಯರ ಸ್ಮರಣೆಯಲ್ಲಿ ಸೇವೆಯ ಹೆಜ್ಜೆ!

**ಸತ್ಯಮಿಥ್ಯ ಸುದ್ದಿಮೂಲ ಅಫಜಲಪೂರ/ದೇವಲ ಗಾಣಗಾಪುರ:**
ಕೆಲವೊಂದು ಕಟ್ಟಡಗಳು ಕೇವಲ ಕಟ್ಟಡಗಳಾಗಿರುವುದಿಲ್ಲ. ಅವುಗಳ ಗೋಡೆಗಳೊಳಗೆ ನೆನಪುಗಳು, ಸಂಬಂಧಗಳು ಮತ್ತು ಸೇವೆಯ ಕಥೆಗಳು ಅಡಗಿರುತ್ತವೆ. ಅಂತಹ ಒಂದು ಕಟ್ಟಡಕ್ಕೆ ಇದೀಗ ಹೊಸ ಜೀವ ದೊರೆತಿದೆ.

**ದಿ. ಅಚ್ಚುತ್ ಭಟ್ ಪೂಜಾರಿ ಅವರ ಸ್ಮರಣಾರ್ಥ 10 ಲಕ್ಷ ಸ್ವ–ಂತ ಹಣದಲ್ಲಿ ಕಟ್ಟಡ ನವೀಕರಣ ಪ್ರಿಯಾಂಕ್ ಭಟ್ ಪೂಜಾರಿ ಅವರ ಮಾದರಿ ಕಾರ್ಯ**




ಅಫಜಲಪುರ ತಾಲೂಕಿನ ಸುಕ್ಷೇತ್ರ ದೇವಲ ಗಾಣಗಾಪುರದ ಸಂಗಮ ರಸ್ತೆಯಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಹಾಳುಬಿದ್ದ ಕಟ್ಟಡಕ್ಕೆ , ಸಂಘದ ಅಧ್ಯಕ್ಷ ಪ್ರಿಯಾಂಕ್ ಭಟ್ ನಾಗೇಶ್ ಭಟ್ ಪೂಜಾರಿ ಅವರು ತಮ್ಮ ಸ್ವಂತ ಖರ್ಚಿನಲ್ಲಿ ಸುಮಾರು □10 ಲಕ್ಷ ವೆಚ್ಚ ಮಾಡಿ ನವೀಕರಣಗೊಳಿಸಿದ್ದಾರೆ.

ಈ ಕಾರ್ಯದ ಹಿಂದೆ ಕೇವಲ ಕಟ್ಟಡದ ಅಭಿವೃದ್ಧಿಯ ಉದ್ದೇಶವಷ್ಟೇ ಇಲ್ಲ. ಸಮಾಜ ಸೇವೆಯಲ್ಲಿ ಸದಾ ಮುಂಚೂಣಿಯಲ್ಲಿದ್ದು, ಗ್ರಾಮದ ವಿವಿಧ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ದಿ. ಅಚ್ಚುತ್ ಭಟ್ ಪೂಜಾರಿ ಅವರ ಸ್ಮರಣಾರ್ಥವಾಗಿ ಈ ಸೇವಾ ಕಾರ್ಯವನ್ನು ಕೈಗೊಳ್ಳಲಾಗಿದೆ. ಒಂದು ಕಾಲದಲ್ಲಿ ಮುಳ್ಳುಕಂಟಿಗಳಿಂದ ಮುಚ್ಚಿಹೋಗಿದ್ದ ಈ ಸ್ಥಳ, ಅನೈರ್ಮಲ್ಯದಿಂದ ಕೂಡಿದ್ದು, ಕಟ್ಟಡದ ಮೇಲ್ಛಾವಣಿ ಸೋರುತ್ತಿತ್ತು. ಸಾರ್ವಜನಿಕರು ಹಾಗೂ ರೈತರು ಬಳಸಲು ಕಷ್ಟವಾಗಿದ್ದ ಕಟ್ಟಡ ಇಂದು ದುರಸ್ತಿ, ಸ್ವಚ್ಛತೆ ಮತ್ತು ನವೀಕರಣದ ಮೂಲಕ ಹೊಸ ರೂಪ ಪಡೆದುಕೊಂಡಿದೆ.

**ನೆನಪನ್ನು ಉಳಿಸುವ ವಿಭಿನ್ನ ಪ್ರಯತ್ನ:** ತಮ್ಮ ಮನೆಯ ಹಿರಿಯರ ನೆನಪನ್ನು ಕೇವಲ ಮನಸ್ಸಿನಲ್ಲಿ ಉಳಿಸಿಕೊಳ್ಳುವುದಕ್ಕಿಂತ, ಅವರ ಹೆಸರಿನಲ್ಲಿ ಸಮಾಜಕ್ಕೆ ಉಪಯೋಗವಾಗುವ ಕೆಲಸ ಮಾಡಬೇಕು ಎಂಬ ಆಲೋಚನೆಯೊಂದಿಗೆ ಪ್ರಿಯಾಂಕ್ ಭಟ್ ಪೂಜಾರಿ ಅವರು ಈ ಕಾರ್ಯಕ್ಕೆ ಮುಂದಾಗಿದ್ದಾರೆ.

"ಈ ಭಾಗದ ರೈತರು ಹಾಗೂ ಮುಖಂಡರು ನನ್ನ ಮೇಲೆ ವಿಶ್ವಾಸವಿಟ್ಟು ಸಂಘದ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದ್ದಾರೆ. ಅವರ ವಿಶ್ವಾಸಕ್ಕೆ ಪ್ರತಿಯಾಗಿ ಏನಾದರೂ ಮಾಡಬೇಕು ಎಂಬುದು ನನ್ನ ಆಶಯ. ನಮ್ಮ ಹಿರಿಯರಾದ ದಿ. ಅಚ್ಚುತ್ ಭಟ್ ಪೂಜಾರಿ ಅವರ ಸ್ಮರಣಾರ್ಥವಾಗಿ ಈ ಕಾರ್ಯವನ್ನು ಕೈಗೊಂಡಿದ್ದೇನೆ. ರೈತರಿಗೆ ಅನುಕೂಲವಾಗುವುದು ನನಗೆ ಸಂತೋಷದ ವಿಷಯ," ಎಂದು ಪ್ರಿಯಾಂಕ್ ಭಟ್ ಪೂಜಾರಿ ತಿಳಿಸಿದ್ದಾರೆ.

ಅಧ್ಯಕ್ಷ ಸ್ಥಾನವೆಂದರೆ ಕೇವಲ ಅಧಿಕಾರದ ಸ್ಥಾನವಲ್ಲ, ಸಿಕ್ಕ ಅವಕಾಶವನ್ನು ಸಮಾಜದ ಒಳಿತಿಗಾಗಿ ಬಳಸುವ ಜವಾಬ್ದಾರಿ ಎಂಬುದನ್ನು ತಮ್ಮ ಕಾರ್ಯದ ಮೂಲಕ ತೋರಿಸಿರುವ ಪ್ರಿಯಾಂಕ್ ಭಟ್ ಪೂಜಾರಿ ಅವರ ನಡೆ ಗ್ರಾಮಸ್ಥರ ಮೆಚ್ಚುಗೆಗೆ ಪಾತ್ರವಾಗಿದೆ.

ರೈತರ ಹಿತಕ್ಕಾಗಿ ಸ್ಥಾಪನೆಯಾಗಿರುವ ಸಹಕಾರ ಸಂಘದ ಕಟ್ಟಡಕ್ಕೆ ಹೊಸ ರೂಪ ನೀಡುವ ಮೂಲಕ ರೈತರು ಹಾಗೂ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿರುವುದು ಈ ಕಾರ್ಯದ ವಿಶೇಷತೆಯಾಗಿದೆ.

ಈ ಸೇವಾ ಕಾರ್ಯಕ್ಕೆ. ಶಾಸಕ ಎಂ.ವೈ. ಪಾಟೀಲ್, ಮಾಜಿ ಸಚಿವ ಮಾಲಿಕಯ್ಯ ಗುತ್ತೇದಾರ್, ವಿಧಾನಪರಿಷತ್ತು ಸದಸ್ಯ ತಿಪ್ಪಣ್ಣಪ್ಪ ಕಮಕನೂರ್, ಕೆ ಕೆ ಆರ್ ಟಿ ಸಿ ನಿಗಮ ಮಂಡಳಿಯ ಅಧ್ಯಕ್ಷ ಅರುಣ್ ಕುಮಾರ್ ಎಂ ವಾಯ ಪಾಟೀಲ್, ಜಿಲ್ಲಾ ಪಂಚಾಯತಿ ಅಧ್ಯಕ್ಷರು ನಿತಿನ್ ಗುತೆ–ೕದಾರ್ ಹಾಗೂ ನಗರ ಯೋಜನೆ ಪ್ರಾಧಿಕಾರ ಸದಸ್ಯರಾದ ಮಾರುತಿ ಮೂರನತ್ತಿ. ಗ್ರಾಮದ ವಿವಿಧ ಸಮಾಜದ ಮುಖಂಡರು ಸೇರಿದಂತೆ ಗ್ರಾಮದ ಮುಖಂಡರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸಂಘದ ಅಧಿಕಾರಿಗಳು ಹಾಗೂ ಸದಸ್ಯರೂ ಅಧ್ಯಕ್ಷರ ಕಾರ್ಯವನ್ನು ಪ್ರಶಂಸಿಸಿದ್ದಾರೆ.

ಹಿರಿಯರ ನೆನಪಿಗೆ ಒಂದು ಗೌರವ
ರೈತರ ಹಿತಕ್ಕೆ ಒಂದು ಸೇವೆ
ಹಾಳುಬಿದ್ದ ಕಟ್ಟಡಕ್ಕೆ ಒಂದು ಹೊಸ ಜೀವ
ಇದೇ ಪ್ರಿಯಾಂಕ್ ಭಟ್ ಪೂಜಾರಿ ಅವರ ಕಾರ್ಯದ ವಿಶೇಷತೆ.




# ಕಾಮನ್ ಮ್ಯಾನ್ ನಾನೇ ಸಿಎಂ ಚಿತ್ರಕ್ಕೆ ಭರ್ಜರಿ ಪ್ರತಿಕ್ರಿಯೆ

## ಸಾಮಾನ್ಯ ಜನರಿಗೂ ರಾಜಕೀಯದ ಒಳನೋಟ ಅರ್ಥವಾಗುತ್ತದೆ ಎಂದ ಸಿನಿ ಪ್ರೇಕ್ಷಕರು

**ಸತ್ಯಮಿಥ್ಯ ಸಿನಿಸುದ್ದಿ**
ಕನ್ನಡ ಚಿತ್ರರಂಗದಲ್ಲಿ ವಿಭಿನ್ನ ನಿರೀಕ್ಷೆ ಮೂಡಿಸಿದ್ದ ಕಾಮನ್ ಮ್ಯಾನ್ ನಾನೇ ಸಿಎಂ ಸಿನಿಮಾ ಸೆ.25ರಂದು ರಾಜ್ಯಾದ್ಯಂತ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿದ್ದು, ಮೊದಲ ದಿನವೇ ಸಿನಿಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಚಿತ್ರ ವೀಕ್ಷಿಸಿದ ಪ್ರೇಕ್ಷಕರು ಸಿನಿಮಾದ ಕುರಿತು ಮೆಚ್ಚುಗೆಯ ಮಾತುಗಳನ್ನು ಹಂಚಿಕೊಂಡಿದ್ದು, ಹಲವು ಕಡೆಗಳಲ್ಲಿ ಚಿತ್ರತಂಡದ ಸದಸ್ಯರಿಗೆ ಹಾರ ತುರಾಯಿ ಹಾಕಿ ಅಭಿನಂದಿಸಿ ಸಂಭ್ರಮಿಸಿದ್ದಾರೆ.



ಚಿತ್ರಮಂದಿರಕ್ಕೆ ಆಗಮಿಸಿದ ಪ್ರೇಕ್ಷಕರು ಸಿನಿಮಾ ವೀಕ್ಷಿಸಿದ ಬಳಿಕ ಚಿತ್ರತಂಡದ ಪ್ರಯತ್ನವನ್ನು ಮೆಚ್ಚಿಕೊಂಡರು. ರಾಜಕೀಯದ ಒಳಸುಳಿಗಳು, ಅಧಿಕಾರದ ಸುತ್ತ ನಡೆಯುವ ಬೆಳವಣಿಗೆಗಳು ಹಾಗೂ ಸಾಮಾನ್ಯ ಜನರ ಬದುಕಿನೊಂದಿಗೆ ರಾಜಕೀಯ ಹೇಗೆ ಬೆಸೆದುಕೊಂಡಿದೆ ಎಂಬ ವಿಚಾರಗಳನ್ನು ಸಿನಿಮಾ ಪ್ರೇಕ್ಷಕರ ಮುಂದೆ ತರುತ್ತದೆ ಎಂದು ಸಿನಿಪ್ರೇಕ್ಷಕರು ಅಭಿಪ್ರಾಯಪಟ್ಟರು.

"ಸಾಮಾನ್ಯ ಜನರು ಒಮ್ಮೆ ಚಿತ್ರಮಂದಿರಕ್ಕೆ ಬಂದು ಕಾಮನ್ ಮ್ಯಾನ್ ನಾನೇ ಸಿಎಂ ಸಿನಿಮಾ ನೋಡಬೇಕು. ಸಿನಿಮಾ ನೋಡಿದಾಗ ರಾಜಕೀಯದ ಒಳನೋಟ ಹೇಗಿರುತ್ತದೆ, ಅಧಿಕಾರದ ಹಿಂದೆ ನಡೆಯುವ ಬೆಳವಣಿಗೆಗಳು ಯಾವ ರೀತಿಯ ಪರಿಣಾಮ ಬೀರುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ" ಎಂದು ಚಿತ್ರ ವೀಕ್ಷಿಸಿದ ಪ್ರೇಕ್ಷಕರು ಹೇಳಿದರು.

ಬಿಡುಗಡೆಯ ಮೊದಲ ದಿನವೇ ಹಲವು ಚಿತ್ರಮಂದಿರಗಳಲ್ಲಿ ಪ್ರೇಕ್ಷಕರ ಉತ್ಸಾಹ ಕಂಡುಬಂದಿದ್ದು, ಸಿನಿಮಾ ಮುಗಿದ ನಂತರವೂ ಚಿತ್ರದ ವಿಚಾರಗಳ ಕುರಿತು ಚರ್ಚೆ ನಡೆಯಿತು. ಕೆಲವೆಡೆ ಅಭಿಮಾನಿಗಳು ಹಾಗೂ ಸಿನಿಪ್ರೇಕ್ಷಕರು ಚಿತ್ರತಂಡವನ್ನು ಆತ್ಮೀಯವಾಗಿ ಬರಮಾಡಿಕೊಂಡು ಹಾರ ತುರಾಯಿ ಹಾಕಿ ಗೌರವಿಸಿದರು. ತಂಡದ ಸದಸ್ಯರೊಂದಿಗೆ ಫೋಟೋ ತೆಗೆಸಿಕೊಂಡು ಸಂತಸ ಹಂಚಿಕೊಂಡರು.

"ಇದು ಕೇವಲ ಸಿನಿಮಾ ನೋಡಿ ಹೊರಬರುವ ಅನುಭವವಲ್ಲ. ಸಿನಿಮಾ ಮುಗಿದ ಮೇಲೂ ಅದರಲ್ಲಿರುವ ವಿಚಾರಗಳ ಬಗ್ಗೆ ಯೋಚಿಸುವಂತಾಗಿದೆ. ಸಾಮಾನ್ಯ ಜನರಿಗೂ ರಾಜಕೀಯ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳುವ ರೀತಿಯಲ್ಲಿ ಚಿತ್ರವನ್ನು ರೂಪಿಸಿರುವುದು ವಿಶೇಷ" ಎಂದು ಮತ್ತೊಬ್ಬ ಪ್ರೇಕ್ಷಕರು ಅಭಿಪ್ರಾಯಪಟ್ಟರು.

ಚಿತ್ರದ ಪ್ರಮುಖ ಪಾತ್ರದಲ್ಲಿ ಗೌರಿಶಂಕರ್ ಎಸ್‌ಆರ್‌ಜಿ ಅಭಿನಯಿಸಿದ್ದು, ಸೋನಲ್ ಲಡ್ವಾ ಹಾಗೂ ಸಬ್ಬಿ ಸೂರಿ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಎನ್. ನರಸಿಂಹ ಮೂರ್ತಿ ನಿರ್ಮಾಣ ಹಾಗೂ ಕಥೆ ಬರೆದಿದ್ದು, ಓಂ ಸಾಯಿ ಪ್ರಕಾಶ್ ನಿರ್ದೇಶನ ಮತ್ತು ಚಿತ್ರಕಥೆ ನೀಡಿದ್ದಾರೆ.

ಚಿತ್ರದ ಪ್ರಚಾರದ ಹಂತದಲ್ಲಿಯೇ ಟೀಸರ್, ಹಾಡುಗಳು ಹಾಗೂ ಪ್ರಚಾರ ವಾಹನಕ್ಕೆ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಇದೀಗ ಸಿನಿಮಾ ಬಿಡುಗಡೆಯಾದ ಬಳಿಕ ಚಿತ್ರಮಂದಿರಗಳಲ್ಲಿಯೂ ಪ್ರೇಕ್ಷಕರ ಸ್ಪಂದನೆ ದೊರೆಯುತ್ತಿರುವುದು ಚಿತ್ರತಂಡದಲ್ಲಿ ಸಂತಸ ಮೂಡಿಸಿದೆ.

ಕಾಮನ್ ಮ್ಯಾನ್ ನಾನೇ ಸಿಎಂ ಸಿನಿಮಾ ವೀಕ್ಷಿಸಿದ ಪ್ರೇಕ್ಷಕರ ಸಂಭ್ರಮ, ಚಿತ್ರತಂಡಕ್ಕೆ ಸಿಕ್ಕ ಆತ್ಮೀಯ ಸ್ವಾಗತ ಹಾಗೂ ಹಾರ ತುರಾಯಿ ಮೂಲಕ ನಡೆದ ಅಭಿನಂದನೆಗಳು ಬಿಡುಗಡೆಯ ಮೊದಲ ದಿನದ ವಿಶೇಷ ಕ್ಷಣಗಳಾಗಿ ಗಮನ ಸೆಳೆದವು.

ಚಿತ್ರತಂಡದ ಸದಸ್ಯರು ಪ್ರೇಕ್ಷಕರ ಪ್ರೀತಿ ಹಾಗೂ ಬೆಂಬಲಕ್ಕೆ ಧನ್ಯವಾದ ಅರ್ಪಿಸಿದ್ದು, ಮುಂದಿನ ದಿನಗಳಲ್ಲಿಯೂ ಇದೇ ರೀತಿಯ ಪ್ರೋತ್ಸಾಹ ದೊರೆಯುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಚಿತ್ರಮಂದಿರಗಳಲ್ಲಿ ಪ್ರೇಕ್ಷಕರ ಪ್ರತಿಕ್ರಿಯೆ ಮುಂದುವರಿದಿದ್ದು, ಕಾಮನ್ ಮ್ಯಾನ್ ನಾನೇ ಸಿಎಂ ಸಿನಿಮಾ ಬಿಡುಗಡೆಯ ಆರಂಭದಲ್ಲೇ ಗಮನ ಸೆಳೆದಿದೆ.

# ರೈಲು ಡಿಕ್ಕಿಯಾಗಿ 8 ಎಮ್ಮೆ ಸಾವು

**ಹೊಸಪೇಟೆ:** ಹಳಿ ದಾಟುತ್ತಿದ್ದ ವೇಳೆ ವೇಗವಾಗಿ ಬಂದ ರೈಲು ಡಿಕ್ಕಿ ಹೊಡೆದ ಪರಿಣಾಮ ಎಂಟು ಎಮ್ಮೆಗಳು ಸ್ಥಳದಲ್ಲೇ ಸತ್ತಿರುವ ಘಟನೆ ತಾಲೂಕಿನ ಮರಿಯಮ್ಮನಹಳ್ಳಿ ಬಳಿ ಗುರುವಾರ ನಡೆದಿದೆ.

ಸ್ಥಳೀಯ ನಿವಾಸಿ ಕಾಳಪ್ಪ ಎಂಬುವರಿಗೆ ಸೇರಿದ ಎಮ್ಮೆಗಳು ಮೇಯಲು ಹೋಗಿದ್ದಾಗ ಈ ದುರ್ಘಟನೆ ನಡೆದಿದೆ. ಡಿಕ್ಕಿ ರಭಸಕ್ಕೆ 8 ಎಮ್ಮೆಗಳು ಸ್ಥಳದಲ್ಲೇ ಪ್ರಾಣಬಿಟ್ಟಿವೆ. ತಮ್ಮ ಜೀವನೋಪಾಯಕ್ಕೆ ಆಸರೆಯಾಗಿದ್ದ ಎಮ್ಮೆಗಳು ಕಣ್ಣೆದುರೇ ಸಾವನ್ನಪ್ಪಿದ್ದನ್ನು ಕಂಡು ಮಾಲೀಕ ಕಾಳಪ್ಪ ಕಣ್ಣೀರಿಟ್ಟಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆ ರೈಲ್ವೆ ಇಲಾಖೆ ಹಾಗೂ ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.




# ಮಾಸಿಕ ಗೌರವಧನಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

**ಗದಗ:** 2026–27 ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಅಲ್ಪಸಂಖ್ಯಾತರ ಸಮುದಾಯ ನೋಂದಾಯಿತ ಜೈನ್ ಬಸದಿಗಳ ಅರ್ಚಕರು, ಬೌದ್ಧ ವಿಹಾರಗಳ ಧಮ್ಮಚಾರಿಗಳು ಮತ್ತು ಸಿಖ್ ಗುರುದ್ವಾರಗಳ ಗ್ರಂಥಿಗಳಿಗೆ ಮಾಸಿಕ ಗೌರವಧನ ವಿತರಿಸಲು ಆನ್‌ಲೈನ್ ಸೇವಾ ಸಿಂಧು ತಂತ್ರಾಂಶದ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸೇವಾ ಸಿಂಧು ತಂತ್ರಾಂಶದ ಮೂಲಕ ಸಲ್ಲಿಸಿರುವ ಅರ್ಜಿಗಳನ್ನು ಖುದ್ದು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಛೇರಿಗೆ ಎಲ್ಲಾ ದಾಖಲೆಗಳೊಂದಿಗೆ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಗದಗ ಇವರನ್ನು ಸಂಪರ್ಕಿಸಲು ತಿಳಿಸಲಾಗಿದೆ.

# ಸಂತ–ಶರಣರ ತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಿ: ಸ.ಸ. ಪ್ರಭುಜಿ ಮಹಾರಾಜರು

## ಬಾಡಗಿ ಜಾತ್ರೆಯಲ್ಲಿ ಮೊಳಗಿದ ಆಧ್ಯಾತ್ಮಿಕ ಸಂದೇಶ | ಭಕ್ತಿ, ಆಧ್ಯಾತ್ಮದ ಸಂಗಮದಲ್ಲಿ ಬಾಡಗಿ ಜಾತ್ರಾ ಮಹೋತ್ಸವ

**ಸತ್ಯಮಿಥ್ಯ ಸುದ್ದಿಮೂಲ ಬಾಗಲಕೋಟೆ:**
ಬಾಹುಸಾಹೇಬ ಮಹಾರಾಜರ ಹೇಳಿದಂತೆ, ನಾಮ ತೆಗೆದುಕೊಳ್ಳಬೇಕು, ನಿಯಮಗಳನ್ನುಪಾಲಿಸಬೇಕು.ಸದ್ಗುರುವಿಗೆಶರಣಾಗಬೇಕು,ಸದ್ಗುರುವಿನಿಂದ ಉಪದೇಶ ಪಡೆದುಕೊಳ್ಳಬೇಕು ಹಾಗೂ ಸದ್ಗುರುಗಳು ಹೇಳಿದ ಮಾರ್ಗದಲ್ಲಿ ನಡೆಯಬೇಕು. ಎಂದು ಇಂಚಗೇರಿ ಮಠದ ಸ.ಸ. ಪ್ರಭುಜಿ ಮಹಾರಾಜರು ಹೇಳಿದರು.

ಅಥಣಿ ತಾಲೂಕಿನ ಬಾಡಗಿ ಗ್ರಾಮದಲ್ಲಿ ಸಿದ್ದಪುರುಷ, ಮಹಾನ್ ಧನ್ವಂತರಿ ಶ್ರೀ ಸ.ಸ. ಚನ್ನಸಂಗಮೇಶ್ವರ ಮಹಾರಾಜರ ಜಾತ್ರಾ ಮಹೋತ್ಸವದ ನಿಮಿತ್ತ ನಡೆದ ಸುವಿಚಾರ ಹಾಗೂ ರಥೋತ್ಸವ ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಸಂತ–ಶರಣರು ತಮ್ಮ ಬದುಕಿನ ಮೂಲಕ ಸಮಾಜಕ್ಕೆ ಸನ್ಮಾರ್ಗ ತೋರಿಸಿದ್ದಾರೆ. ಅವರ ವಚನ ಹಾಗೂ ತತ್ವಗಳನ್ನು ಕೇವಲ ಕೇಳುವುದಕ್ಕೆ ಸೀಮಿತಗೊಳಿಸದೆ, ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸದ್ಗುರುವೇ ನಮ್ಮ ಬದುಕಿನ ಎಲ್ಲ ಆಧಾರ ಎಂದು ತಿಳಿದುಕೊಂಡು, ಅವರು ತೋರಿಸಿದ ಮಾರ್ಗದಲ್ಲಿ ನಡೆಯಬೇಕು. ಭಕ್ತಿ, ಶ್ರದ್ಧೆ, ಆಸಕ್ತಿ ಮತ್ತು ಪ್ರೇಮದಿಂದ ಸದ್ಗುರುವಿನ ಸೇವೆ ಮಾಡಬೇಕು. ಸದ್ಗುರುವೇ ನಮ್ಮ ಬದುಕಿನ ಎಲ್ಲ ಆಧಾರ ಎಂದು ತಿಳಿದುಕೊಂಡು, ಅವರು ತೋರಿಸಿದ ಮಾರ್ಗದಲ್ಲಿ ನಡೆಯಬೇಕು ಎಂದರು.

ರೈತ ಸಂಘದ ರಾಜ್ಯ ಗೌರವಾಧ್ಯಕ್ಷರಾದ ಶಶಿಕಾಂತ ಗೂರುಜಿ ಮಾತನಾಡಿ ಅವರು ಹಿಂದಿನ ಕಾಲದ ಮಹನೀಯರು ಹೆಚ್ಚಿನ ವಿದ್ಯಾಭ್ಯಾಸ ಮಾಡದಿದ್ದರೂ, ಶಾಸ್ತ್ರ–ಪುರಾಣಗಳ ಆಳವಾದ ಅಧ್ಯಯನ ನಡೆಸದಿದ್ದರೂ, ಗುರುವಿನ ಮೇಲೆ ಅಖಂಡವಾದ ವಿಶ್ವಾಸವನ್ನಿಟ್ಟುಕೊಂಡು ಆಧ್ಯಾತ್ಮಿಕ ಸಾಧನೆಯ ಮೂಲಕ ಜೀವನವನ್ನು ಸಾರ್ಥಕಗೊಳಿಸಿಕೊಂಡಿದ್ದರು. ಗುರುವಿನ ಮೇಲೆ ಸಂಪೂರ್ಣ ವಿಶ್ವಾಸವಿಟ್ಟು, ಭಕ್ತಿ ಹಾಗೂ ಶ್ರದ್ಧೆಯಿಂದ ನಡೆದುಕೊಂಡಾಗ ಬದುಕಿನಲ್ಲಿ ಬದಲಾವಣೆ ಸಾಧ್ಯ. ಗುರುಗಳು ತೋರಿಸುವ ಮಾರ್ಗವನ್ನು ನಂಬಿಕೆಯಿಂದ ಅನುಸರಿಸುವುದೇ ನಿಜವಾದ ಶರಣಾಗತಿ ತಮ್ಮ ಜೀವನದಲ್ಲಿ ಸಾವಿರಾರು ಅಂತರಜಾತಿ ವಿವಾಹಗಳನ್ನು ನೆರವೇರಿಸಿದ ಪ್ರಸಂಗವನ್ನು ವಿವರಿಸಿದ ಅವರು, ಸಮಾಜದಲ್ಲಿ ಜಾತಿ–ಧರ್ಮದ ಗೋಡೆಗಳನ್ನು ನಿರ್ಮಿಸುವುದಕ್ಕಿಂತ ಅವುಗಳನ್ನು ಮೀರಿ ಮಾನವೀಯ ಸಂಬಂಧಗಳಿಗೆ ಆದ್ಯತೆ ನೀಡಬೇಕು, ಒಮ್ಮೆ ಇಂಚಗೇರಿ ಮಠಕ್ಕೆ ಬಂದ ಸಂದರ್ಭದಲ್ಲಿ, "ಸ್ವಾಮೀಜಿ, ಇಷ್ಟೊಂದು ಮದುವೆಗಳನ್ನು ಮಾಡಿಸುತ್ತೀರಿ; ನಿಮಗೆ ಏನು ಸಿಗುತ್ತದೆ?" ಎಂದು ಯಾರೋ ಪ್ರಶ್ನಿಸಿದಾಗ, ಅದಕ್ಕೆ ಯಾವುದೇ ವೈಯಕ್ತಿಕ ಸ್ವಾರ್ಥವಿಲ್ಲದೆ ಸಮಾಜದಲ್ಲಿ ಪ್ರೀತಿ, ಸಮಾನತೆ ಮತ್ತು ಸೌಹಾರ್ದ ಬೆಳೆಸುವುದೇ ಉದ್ದೇಶ ಎಂದು ಹೇಳಿದರು.



> ರೈತನೆಂದರೆ ಕೇವಲ ಹೊಲದಲ್ಲಿ ದುಡಿಯುವವನು ಅಲ್ಲ; ಇಡೀ ಸಮಾಜಕ್ಕೆ ಅನ್ನ ನೀಡುವ ಅನ್ನದಾತ. ಬಿಸಿಲು, ಮಳೆ, ಗಾಳಿ ಎನ್ನದೆ ಮಣ್ಣಿನೊಂದಿಗೆ ಬೆವರು ಸುರಿಸಿ ಬೆಳೆ ಬೆಳೆಯುವ ರೈತನ ಬದುಕಿಗೂ ಗೌರವ ನೀಡಿ. ಮಕ್ಕಳ ಭವಿಷ್ಯಕ್ಕೆ ನೌಕರಿಯಷ್ಟೇ ಮುಖ್ಯವಲ್ಲ; ದುಡಿಮೆ, ಸ್ವಾಭಿಮಾನ, ಜವಾಬ್ದಾರಿ ಮತ್ತು ನೆಲದ ನಂಟು ಕೂಡ ಮುಖ್ಯ. ಆದ್ದರಿಂದ ಮನೆಗೆ ಹೆಣ್ಣು ಕೇಳಲು ಬಂದಾಗ, ರೈತನನ್ನೂ ಗೌರವದಿಂದ ಪರಿಗಣಿಸಿ ರೈತನಿಗೆ ಹೆಣ್ಣು ಕೊಡಿ, ರೈತನ ಬದುಕಿಗೆ ಬೆಂಬಲವಾಗಿ ನಿಲ್ಲಿ.
> | ಶಶಿಕಾಂತ ಗೂರುಜಿ, ರಾಜ್ಯ ರೈತ ಸಂಘದ ಗೌರವಾಧ್ಯಕ್ಷರು

ಅಥಣಿ ಮಾಜಿ ಶಾಸಕ ಶಹಾಜಾನಂದ ಡೊಂಗರಗಾಂವ ಮಾತನಾಡಿ, 'ಜೈ ಜವಾನ್, ಜೈ ಕಿಸಾನ್' ಎಂಬ ಘೋಷಣೆಯ ಆಶಯದಂತೆ ದೇಶದ ಗಡಿಯಲ್ಲಿ ನಿಂತು ರಾಷ್ಟ್ರವನ್ನು ರಕ್ಷಿಸುತ್ತಿರುವ ಸೈನಿಕರು ಹಾಗೂ ದೇಶದ ಅನ್ನದಾತರಾದ ರೈತರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ದೇಶದ ರಕ್ಷಣೆಗೆ ಸೈನಿಕರು ಸಲ್ಲಿಸುತ್ತಿರುವ ಸೇವೆ ಹಾಗೂ ರೈತರು ದೇಶದ ಜನತೆಗೆ ಅನ್ನ ನೀಡುವ ಮೂಲಕ ಮಾಡುತ್ತಿರುವ ಸೇವೆ ಅಮೂಲ್ಯವಾದದ್ದು ಎಂದರು.

ಕಾರ್ಯಕ್ರಮ ನಿರೂಪಣೆಯನ್ನು ಶಿಕ್ಷಕರಾದ ಬಿ. ಕೆ. ಮುಧೋಳ ಅವರು ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಬಾಡಗಿ ಮಠದ ಸಿದಲಿಂಗ ಸಾದು ಮಹಾರಾಜರು, ಚಿಕ್ಕಾಲಗುಂಡಿ ಮಠದ ಶಿವಶರಣಾನಂದ ಸ್ವಾಮೀಜಿ, ಕಕಮರಿ ಮಠದ ಆತ್ಮಾನಂದ ಸ್ವಾಮೀಜಿ, ಅಥಣಿ ಶಾಸಕ ಮಾಜಿ ಶಾಸಕ ಮಹೇಶ್ ಕುಮಟಳ್ಳಿ, ಬಾಗಲಕೋಟೆ ಜಿಲ್ಲೆಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜಂಟಿ ನಿರ್ದೇಶಕ ಸಿದ್ದರಾಮೇಶ್ವರ ಉಕ್ಕಲಿ, ಬಾಗಲಕೋಟೆ ಜಿಲ್ಲೆಯ ಉಪ ನಿರ್ದೇಶಕ ಮಲ್ಲನಗೌಡ ಝುರೆ, ಸಿದ್ದು ಹಳ್ಳಿ, ಚನ್ನಪ್ಪ ನ್ಯಾಮಗೌಡ, ವಿಠ್ಠಲ ಮುಧೋಳ, ಗುರಪ್ಪ ನ್ಯಾಮಗೌಡ, ಮಹಾಂತೇಶ ಮಮದಾಪೂರ, ವೈದ್ಯರು, ಸೈನಿಕರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

### ಮಾಜಿ ಹಾಗೂ ಹಾಲಿ ಸೈನಿಕರಿಗೆ ಸನ್ಮಾನ

ದೇಶದ ಗಡಿ ಕಾಯುವ ಮೂಲಕ ರಾಷ್ಟ್ರದ ಭದ್ರತೆಗಾಗಿ ತಮ್ಮ ಜೀವನವನ್ನೇ ಸಮರ್ಪಿಸಿದ ಹಾಲಿ ಹಾಗೂ ಮಾಜಿ ಸೈನಿಕರನ್ನು ಗೌರವಿಸುವ ಸನ್ಮಾನ ಸಮಾರಂಭವು ಜಾತ್ರಾ ಮಹೋತ್ಸವದ ಅಂಗವಾಗಿ ಗೌರವ ಹಾಗೂ ಹೆಮ್ಮೆಯ ವಾತಾವರಣದಲ್ಲಿ ನಡೆಯಿತು. ದೇಶಸೇವೆ ಸಲ್ಲಿಸುತ್ತಿರುವ ಹಾಗೂ ಸಲ್ಲಿಸಿ ನಿವೃತ್ತರಾದ ವೀರಯೋಧರಿಗೆ ಗೌರವ ಸಲ್ಲಿಸಿ, ಅವರ ತ್ಯಾಗ, ಸೇವೆ ಹಾಗೂ ಸಾಹಸವನ್ನು ಸ್ಮರಿಸಲಾಯಿತು. ಕಾರ್ಯಕ್ರಮದಲ್ಲಿ ಸೈನಿಕರಿಗೆ ಶಾಲು ಹಾಗೂ ಹಾರ ಹಾಕಿ ಗೌರವಿಸಲಾಯಿತು.

# ಸಂಸ್ಥೆಯ ಏಳಿಗೆಗೆ ಸದಸ್ಯರು, ಸಿಬ್ಬಂದಿ ಕೊಡುಗೆ ಅಪಾರ : ಅಪ್ಪು ಕೊಟಗಿ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ :**
ನಮ್ಮ ಹಣಕಾಸು ಸಂಸ್ಥೆಯ ಏಳಿಗೆಯಲ್ಲಿ ಠೇವಣಿದಾರರ, ಷೇರುದಾರರ ಮತ್ತು ಸಾಲಗಾರರ ಕೊಡುಗೆಅಪಾರವಾದದ್ದುಅದರೊಂದಿಗೆಸಂಸ್ಥೆಯ ಸಿಬ್ಬಂದಿಗಳ ಕಾರ್ಯವೈಖರಿ ಮೆಚ್ಚುವಂತಹದ್ದು ಎಂದು ಪ್ರಿಯದರ್ಶಿನಿ ವಿವಿಧೋದ್ದೇಶಗಳ ಸಹಕಾರಿ ಸಂಘದ ಅಧ್ಯಕ್ಷರಾದ ಮಾಗುಂಡಪ್ಪ (ಅಪ್ಪು) ಕೊಟಗಿ ಹೇಳಿದರು.

ನಗರದ ಉಣಚಗೇರಿ ರಸ್ತೆಯ ಶ್ರೀ ವಿಘ್ನೇಶ್ವರ ವಿದ್ಯಾವರ್ಧಕ ಸಂಘ ಮತ್ತಿಕಟ್ಟಿ ಕಾಲೇಜು ಆವರಣದಲ್ಲಿ ಜರುಗಿದ ಪ್ರಿಯದರ್ಶಿನಿ ವಿವಿಧೋದ್ದೇಶಗಳ ಸಹಕಾರಿ ಸಂಘ'ದ 2025–26ನೇ ಸಾಲಿನ 27ನೇ ವರ್ಷದ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡುತ್ತ. ನಮ್ಮ ಹಿರಿಯರು ಜನಸಾಮಾನ್ಯರ ಆರ್ಥಿಕ ಪರಿಸ್ಥಿತಿ ಮತ್ತು ಅವರ ಉದ್ಯೋಗಗ–ಕ್ಕೆ ಸಹಕಾರಿಯಾಗಲೆಂದು ಈ ಹಣಕಾಸು ಸಂಸ್ಥೆಯನ್ನು ಸ್ಥಾಪಿಸಿದರು ಇಂದು ಆ ಉದ್ದೇಶ ಸಾಕಾರವಾಗುತ್ತಿದೆ. ಪ್ರಸಕ್ತ ವರ್ಷದಲ್ಲಿ 15 ಲಕ್ಷ ರೂ ಲಾಭವನ್ನು ಹೊಂದಿದ್ದು ಈ ಹಣಕಾಸು ಸಂಸ್ಥೆ ಇನ್ನಷ್ಟು ಪ್ರಗತಿ ಹೊಂದಲು ಸಾಲ ತೆಗೆದು–ಕೊಂಡ ಸದಸ್ಯರು ಸರಿಯಾದ ಸಮಯಕ್ಕೆ ಸಾಲ ಮರುಪಾವತಿ ಮಾಡಿ ಉತ್ತಮ ಗ್ರಾಹಕರೆನಿಸಿಕೊಳ್ಳಿ ಎಂದರು.

ಸಂಘದ ಕಾರ್ಯದರ್ಶಿ ಅಮರಯ್ಯ ಗೌರಿಮಠ ಅವರು ವಾರ್ಷಿಕ ವರದಿ ವಾಚನ ಮಾಡಿದರು.

> **ಪ್ರಿಯದರ್ಶಿನಿ ಸಹಕಾರಿ ಸಂಘದ 27ನೇ ವಾರ್ಷಿಕ ಮಹಾಸಭೆ:**

ಸಾಮಾಜಿಕ ಹೊಣೆಗಾರಿಕೆಯ ಭಾಗವಾಗಿ ಸಂಘದ ಸದಸ್ಯರ ಪ್ರತಿಭಾವಂತ 30 ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಿ ಗೌರವಿಸಲಾಯಿತು ಮತ್ತು ಸಂಸ್ಥೆಗೆ ಗುರುತರ ಕೊಡುಗೆ ನೀಡಿದ 10 ಜನ ಹಿರಿಯ ಸದಸ್ಯರನ್ನು 'ವಿಶೇಷ ಸದಸ್ಯರು' ಎಂದು ಗುರುತಿಸಿ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು.

ಸಭೆಯಲ್ಲಿ ಸಂಘದ ನಿರ್ದೇಶಕರಾದ ನಾಗೇಶ ಲಕ್ಕಲಕಟ್ಟಿ, ಮಹಾಂತೇಶ ಸೊಮನಕಟ್ಟಿ, ಕಳಕಪ್ಪ ಪಟ್ಟಣಶೆಟ್ಟಿ, ನಿಂಗಬಸಪ್ಪ ಮಾಸ್ತಿ, ಕಂಟೇಪ್ಪ ಸಂಗನಾಳ, ಅವಿನಾಶ ಕೊಟಗಿ, ಗೀತಾ ವಾಲಿ, ಸಹನಾ ಕೊಟಗಿ ಹಾಗೂ ಲಕ್ಷ್ಮಣ ಮಲೋತ್ತರ ಅಮರಯ್ಯಗೌರಿಮಠ,ದಾವಲಸಾಬ್‌ತಾಳಿಕೋಟಿ , ಮಂಜುನಾಥ ವೀರಶೆಟ್ಟಿ, ಅಶೋಕ ಬುಗುಡಿ, ಎಚ್. ಜಿ. ಕುಲಕರ್ಣಿ, ವಿ. ಎಂ. ಕಂಚಗಾರ, ನಾಗೇಶ ಕವಡಿಮಟ್ಟಿ, ಸಿದ್ದಲಿಂಗೇಶ ಹದ್ಲಿ ಮತ್ತು ಸುಮಂಗಲಾ ಯಂಕಂಚಿ ಉಪಸ್ಥಿತರಿದ್ದರು.



# ವಿದ್ಯಾರ್ಥಿಗಳಿಗೆ ಸಮಾಜಮುಖಿ ಚಿಂತನೆ ಅಗತ್ಯ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್:**
ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಪಠ್ಯ ಶಿಕ್ಷಣದ ಜತೆ–ಗೆ ಪಠ್ಯೇತರ ಚಟುವಟಿಕೆಗಳೂ ಅಗತ್ಯ. ವಿದ್ಯಾರ್ಥಿಗಳು ಅಂಕ ಗಳಿಸುವುದಕ್ಕಷ್ಟೇ ಸೀಮಿತವಾಗದೆ, ಜ್ಞಾನ ಸಂಪಾದನೆ, ಸಂಸ್ಕಾರ ಹಾಗೂ ಸಮಾಜಮುಖಿ ಚಿಂತನೆ ಬೆಳೆಸಿಕೊಳ್ಳಬೇಕು ಎಂದು ಗದಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಪ್ರಾಂಶುಪಾಲ ಡಾ. ಶಿವಣ್ಣ ಎಂ. ಕುರಿ ಹೇಳಿದರು.

ನರೇಗಲ್ ಪಟ್ಟಣದ ಶ್ರೀ ಮರಿಯಪ್ಪ ಬಾಳಪ್ಪ ಕಳಕೊಣ್ಣವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ನಡೆದ 2026 27ನೇ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ, ಕ್ರೀಡಾ, ಎನ್‌ಎಸ್‌ಎಸ್, ರೋವರ್ಸ್, ರೇಂಜರ್ಸ್, ಮಹಿಳಾ ವೇದಿಕೆ ಹಾಗೂ ಯುವ ರೆಡ್‌ಕ್ರಾಸ್ ಸೇರಿದಂತೆ ವಿವಿಧ ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಕಾಲೇಜು ಜೀವನದಲ್ಲಿ ವಿದ್ಯಾರ್ಥಿಗಳು ಪಠ್ಯದ ಜತೆಗೆ ಸಾಂಸ್ಕೃತಿಕ, ಕ್ರೀಡಾ ಹಾಗೂ ಸಮಾಜಮುಖಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಇದರಿಂದ ಆತ್ಮವಿಶ್ವಾಸ, ನಾಯಕತ್ವ ಗುಣ ಹಾಗೂ ಸಮಾಜದ ಬಗ್ಗೆ ಕಾಳಜಿ ಬೆಳೆಸಿಕೊಳ್ಳಲು ಸಾಧ್ಯ. ವಿದ್ಯಾರ್ಥಿ ಜೀವನದಲ್ಲಿ ರೂಢಿಸಿಕೊಳ್ಳುವ ಉತ್ತಮ ಅಭ್ಯಾಸಗಳೇ ಮುಂದಿನ ಬದುಕಿನ ವ್ಯಕ್ತಿತ್ವವನ್ನು ರೂಪಿಸುತ್ತವೆ ಎಂದರು.

ಶಿಕ್ಷಣವು ಕೇವಲ ಉದ್ಯೋಗ ಪಡೆಯುವ ಸಾಧನವಲ್ಲ. ಉತ್ತಮ ಬದುಕು ಕಟ್ಟಿಕೊಳ್ಳಲು ಅಗತ್ಯವಾದ ಜ್ಞಾನ ಮತ್ತು ಸಂಸ್ಕಾರವನ್ನು ನೀಡಬೇಕು. ವಿದ್ಯಾರ್ಥಿಗಳು ತಂದೆ–ತಾಯಿಗಳ ಕಷ್ಟವನ್ನು ಅರಿತು, ಸಮಯಪಾಲನೆ ಮತ್ತು ಶಿಸ್ತಿಗೆ ಆದ್ಯತೆ ನೀಡಬೇಕು. ಮನಸ್ಸನ್ನು ಚಂಚಲಗೊಳಿಸುವ ದುಶ್ಚಟಗಳಿಂದ ದೂರವಿದ್ದು, ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಎಂ. ಎಸ್. ಧಡೇಸೂರಮಠ ಮಾತನಾಡಿ, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಅಂಕ ಗಳಿಸುವುದಕ್ಕಷ್ಟೇ ಓದದೆ, ಜ್ಞಾನ ಸಂಪಾದಿಸುವ ಉದ್ದೇಶದಿಂದ ಅಧ್ಯಯನ ಮಾಡಬೇಕು. ಪಠ್ಯಪುಸ್ತಕಗಳ ಜತೆಗೆ ಉತ್ತಮ ಸಾಹಿತ್ಯ ಹಾಗೂ ಜ್ಞಾನವರ್ಧಕ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದರು. ಸಾಧಕರು, ಸಾಹಿತಿಗಳು ಹಾಗೂ ಮಹನೀಯರ ಜೀವನ ಮತ್ತು ಸಾಧನೆಗಳನ್ನು ತಿಳಿದುಕೊಂಡು ಅವರ ಜೀವನಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ತಂದೆ–ತಾಯಿಗಳು ಕಷ್ಟಪಟ್ಟು ಮಕ್ಕಳನ್ನು ಸಾಕಿ–ಸಲಹುತ್ತಿರುವುದನ್ನು ಅರಿತು, ಅವರ ನಿರೀಕ್ಷೆಗಳಿಗೆ ತಕ್ಕಂತೆ ಉತ್ತಮವಾಗಿ ಓದಿ ಸಮಾಜಕ್ಕೆ ಉಪಯುಕ್ತ ವ್ಯಕ್ತಿಗಳಾಗಿ ರೂಪುಗೊಳ್ಳಬೇಕು. ಕಾಲೇಜಿನಿಂದ ಹೊರಬರುವಾಗ ಪದವಿಯ ಜತೆಗೆ ಉತ್ತಮ ವ್ಯಕ್ತಿತ್ವವನ್ನೂ ಹೊಂದಿರಬೇಕು ಎಂದು ಹೇಳಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲೆ ಡಾ. ಕಸ್ತೂರೆವ್ವ ಬಿ. ದಳವಾಯಿ, ವಿದ್ಯಾರ್ಥಿಗಳು ಕಾಲೇಜಿನಲ್ಲಿ ದೊರೆಯುವ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಂಡು ತಮ್ಮ ಪ್ರತಿಭೆ ಹಾಗೂ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಹಿರಿಯರು ಮತ್ತು ಶಿಕ್ಷಕರ ಮಾರ್ಗದರ್ಶನ ಪಡೆದು ಶ್ರದ್ಧೆಯಿಂದ ಅಧ್ಯಯನ ಮಾಡಿದಾಗ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ ಎಂದರು.

ಸ್ಪರ್ಧಾತ್ಮ ಪರೀಕ್ಷೆಯ ತರಬೇತುದಾರ ಉಪನ್ಯಾಸಕ ಮಲ್ಲಪ್ಪ ಹೊಸೂರ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಲು ಸ್ಪಷ್ಟ ಗುರಿ, ಛಲ, ಶ್ರದ್ಧೆ ಹಾಗೂ ನಿರಂತರ ಅಧ್ಯಯನ ಅಗತ್ಯ. ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಗುರಿಯನ್ನು ಸ್ಪಷ್ಟವಾಗಿ ನಿರ್ಧರಿಸಿಕೊಂಡು ಅದನ್ನು ಸಾಧಿಸಲು ಸತತ ಪ್ರಯತ್ನ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಭೂದಾನಿ ಬಸವರಾಜ ಕಳಕೊಣ್ಣವರ, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರಾದ ಅರುಣ ಕಾಮತ, ಶರಣಪ್ಪ ಕುರಿ, ರೇಣುಕಾ ಧರ್ಮಾಯತ, ಬಸೀರಾಬಾನು ನದಾಫ್, ಐಕ್ಯೂಎಸಿ ಸಂಚಾಲಕರಾದ ಜಯಶ್ರೀ ಬಿ. ಮುತಗಾರ, ಆಂತರಿಕ ಕಿರು ಪರೀಕ್ಷೆ ವಿಭಾಗದ ಸಂಚಾಲಕರಾದ ಎಸ್. ಎಸ್. ಸೂಡಿ, ಸಾಂಸ್ಕೃತಿಕ ವಿಭಾಗದ ಸಂಚಾಲಕರಾದ ಅಯ್ಯಪ್ಪ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಸುನಂದಾ ಮುಂಜಿ, ಯುಯುಸಿಎಂಎಸ್ ವಿಭಾಗದ ಸಂಚಾಲಕರಾದ ಅನಿಲಕುಮಾರ, ಕ್ರೀಡಾ ವೀಭಾಗದ ಸಂಚಾಲಕರಾದ ವಿರೂಪಾಕ್ಷ ಆರ್, ಉದ್ಯೋಗ ಭರವಸೆ ಕೋಶದ ಸಂಚಾಲಕರಾದ ಶಿವಕುಮಾರ ಕುರುಬರ, ಮಾಹಿತಿ ಮತ್ತು ತಂತ್ರಜ್ಞಾನದ ಸಂಚಾಲಕರಾದ ಶಶಿಕಲಾ ವಿ. ಎಸ್. ಇದ್ದರು. ಉಪನ್ಯಾಸಕ ಎನ್.ಎಸ್. ಹೊನ್ನೂರು ನಿರೂಪಿಸಿದರು.

# ಪಠ್ಯದ ಜೊತೆ ಪಠ್ಯೇತರ ಚಟುವಟಿಕೆಗಳಿಗೂ ಇರಲಿ ಆದ್ಯತೆ: ಬೆಟ್ಟದೂರು

**ಕೊಪ್ಪಳ:** ಶಾಲಾ ಕಾಲೇಜುಗಳಲ್ಲಿ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಆದ್ಯತೆ ನೀಡಬೇಕು. ಪಠ್ಯವು ಜ್ಞಾನದ ದಾರಿಯಾದರೆ, ಪಠ್ಯೇತರ ಚಟುವಟಿಕೆಗಳು ಬದುಕಿಗೆ ದಾರಿದೀಪವಾಗಬಲ್ಲವು ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಹಿತಿ ಪ್ರೊ.ಅಲ್ಲಮಪ್ರಭು ಬೆಟ್ಟದೂರು ಹೇಳಿದರು

ಇಲ್ಲಿನ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ್ದ ಪದವಿಯ ಪ್ರಥಮ ವರ್ಷದ ವಿದ್ಯಾರ್ಥಿನಿಯರ ಸ್ವಾಗತ ಸಮಾರಂಭ ಮತ್ತು ಕಾಲೇಜಿನ ವಿವಿಧ ಘಟಕಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಬದುಕು ರೂಪಿಸುವ, ಜೀವನ ಕಟ್ಟಿಕೊಳ್ಳುವ ಶೈಕ್ಷಣೇತರ ಕಾರ್ಯಗಳಲ್ಲೂ ಕೊಪ್ಪಳದ ವಿದ್ಯಾರ್ಥಿಗಳು ಪಾಲ್ಗೊಳ್ಳಬೇಕಾದ ಅನಿವಾರ್ಯತೆ ಈಗ ಬಂದೊದಗಿದೆ. ಕೊಪ್ಪಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸುಮಾರು 202 ಕೈಗಾರಿಕೆಗಳು ತಲೆ ಎತ್ತಿದ್ದು, ಮತ್ತೆರಡು ಘಟಕಗಳು ವಿಸ್ತರಣೆಗೊಳ್ಳುವ ಸಿದ್ಧತೆಯಲ್ಲಿವೆ. ಇವೆಲ್ಲ ಮನುಷ್ಯನ ಉಸಿರಾಟಕ್ಕೆ ಮಾರಕ ಎಂದರು

ಕೊಪ್ಪಳ ಜಿಲ್ಲೆಯ ಪರಿಸರ ಹಾಳು ಮಾಡಿರುವ ಕೈಗಾರಿಕೆಗಳ ವಿರುದ್ಧ ನಡೆಯುತ್ತಿರುವ ಹೋರಾಟವು ಅಕ್ಟೋಬರ್ 30ರಂದು ವರ್ಷ ಪೂರೈಸಲಿದೆ. ಈ ಹೋರಾಟ ಇಂದಿನ ಹಾಗೂ ಮುಂದಿನ ಯುವಪೀಳಿಗೆಯ ಉಳಿವಿಗಾಗಿ ಮಾತ್ರ. ಇದು ಸರಕಾರದ ವಿರುದ್ಧದ ಹೋರಾಟವಲ್ಲ ಎಂದು ಸ್ಪಷ್ಟಪಡಿಸಿದ ಅವರು, ಇಂಥ ಹೋರಾಟಗಳಿಗೆ ವಿದ್ಯಾರ್ಥಿ ಸಮುದಾಯ ಬಲ ತುಂಬಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ.ಗಣಪತಿ ಕೆ.ಲಮಾಣಿ ಮಾತನಾಡಿ, ಕಳೆದ ಕೆಲವು ವರ್ಷಗಳಿಂದ ಕಾಲೇಜು ಸಾಕಷ್ಟು ಅಭಿವೃದ್ಧಿ ಹೊಂದುತ್ತಿದ್ದು, ನುರಿತ ಅಧ್ಯಾಪಕ ವರ್ಗದ ಪರಿಣಾಮಕಾರಿ ಬೋಧನೆಯಿಂದ ಉತ್ತಮ ಫಲಿತಾಂಶ ಪಡೆಯುತ್ತಿದೆ. ಈ ವರ್ಷ ಪ್ರವೇಶ ಪಡೆದಿರುವ ವಿದ್ಯಾರ್ಥಿನಿಯರು ಕಾಲೇಜಿನ ವಿವಿಧ ಸಕಾರಾತ್ಮಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಾಧನೆ ಮಾಡುವ ಮೂಲಕ ಕಾಲೇಜಿಗೆ ಕೀರ್ತಿ ತರಬೇಕು ಎಂದು ಹೇಳಿದರು. ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಬೂದಿಹಾಳದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹಶಿಕ್ಷಕ ಮೆಹಬೂಬ್ ಅಲಿ ಕೆ.ಎಂ., ಮಾತನಾಡಿ, ಗುರಿ, ಸಮಯ ಪ್ರಜ್ಞೆ, ಸ್ಪರ್ಧಾ ಮನೋಭಾವ,ಶ್ರದ್ಧೆ,ಆತ್ಮವಿಶ್ವಾಸ,ಬದುಕನ್ನೇಬದಲಿಸುವಈಐದು ಮಂತ್ರಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ರೂಢಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಶಿಕ್ಷಣ ಪ್ರೇಮಿಗಳಾದ ಬಿ.ಜಿ. ಕರಿಗಾರ ಮಾತನಾಡಿದರು. ಸಾಂಸ್ಕೃತಿಕ ವಿಭಾಗ, ಎನ್.ಎಸ್.ಎಸ್.ಘಟಕ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥರಾದ ಲಲಿತಾ ಎನ್.ಕೆ. ಅವರು ಮಹಿಳಾ ಕಾಲೇಜಿನ ಉಗಮ ಮತ್ತು ವಿಕಾಸವನ್ನು ಪ್ರಾಸ್ತಾವಿಕದಲ್ಲಿ ಮನಮುಟ್ಟುವಂತೆ ತಿಳಿಸಿದರು. ಈ ವೇಳೆ ಐಕ್ಯೂಎಸಿ ಸಂಚಾಲಕರಾದ ಡಾ.ಶುಭಾ, ಕ್ರೀಡಾ ವಿಭಾಗದ ಮುಖ್ಯಸ್ಥ ಡಾ.ವಿಠೋಬ.ಎಸ್., ಗ್ರಂಥ ಪಾಲಕರಾದ ಡಾ. ಮಲ್ಲಿಕಾರ್ಜುನ. ಬಿ., ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮುಖ್ಯರಾದ ಶುಭ ಟಿ.ಇ., ಐಟಿ ಘಟಕದ ಸುಮಿತ್ರ ಎಸ್.ವಿ., ವಿದ್ಯಾರ್ಥಿ ಕಲ್ಯಾಣಾಧಿಕಾರಿ ಸುಮಯ್ಯ.ಕೆ., ಕಚೇರಿ ಅಧೀಕ್ಷಕ ಅಲ್ಲಾಭಕ್ಷ, ಅತಿಥಿ ಉಪನ್ಯಾಸಕರ ಪ್ರತಿನಿಧಿ ಬಸವರಾಜ ಕರುಗಲ್, ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸಿ, ವಿವಿಧ ಕಾಲೇಜುಗಳಿಗೆ ವರ್ಗಾವಣೆಗೊಂಡಿರುವ ಡಾ.ಗವಿಸಿದ್ದಪ್ಪ ಮುತ್ತಾಳ, ಡಾ.ಹುಲಿಗೆಮ್ಮ, ಡಾ.ನರಸಿಂಹ, ಡಾ. ಪ್ರದೀಪಕುಮಾರ್ ವೇದಿಕೆಯಲ್ಲಿದ್ದರು. ಸಮಾರಂಭದಲ್ಲಿ ಬೋಧಕ–ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು. ನಾಗರತ್ನಾ ಮತ್ತು ಪವಿತ್ರ ನಿರೂಪಿಸಿದರು. ಐಶ್ವರ್ಯ ಮತ್ತು ಲಕ್ಷ್ಮೀ ಸ್ವಾಗತಿಸಿದರು. ಮಧುಮತಿ ವಂದಿಸಿದರು.



### ಹಬ್ಬದ ವಾತಾವರಣ

ಪದವಿಯ ಪ್ರಥಮ ವರ್ಷದ ವಿದ್ಯಾರ್ಥಿನಿಯರಿಗೆ ಆಯೋಜಿಸಿದ್ದ ಸ್ವಾಗತ ಸಮಾರಂಭವು ಕಾಲೇಜಿನಲ್ಲಿ ಹಬ್ಬದ ವಾತಾವರಣ ಸೃಷ್ಟಿಸಿತ್ತು. ವಿದ್ಯಾರ್ಥಿನಿಯರು ಸಮವಸ್ತ್ರದ ಬದಲು ಸೀರೆ ಹಾಗೂ ವಿವಿಧ ಸಾಂಪ್ರದಾಯಿಕ ಉಡುಗೆಯಲ್ಲಿ ಗಮನ ಸೆಳೆದರು. ಊಟೋಪಚಾರದಲ್ಲಿ ಲವಲವಿಕೆಯಿಂದ ಓಡಾಡಿದರು. ಉತ್ಸಾಹದಿಂದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

## ಸಾರ್ವಜನಿಕರ ಗಮನಕ್ಕೆ

**ಗದಗ:** ಗಾಂಧಿ ಜಯಂತಿಯ ಪ್ರಯುಕ್ತ ಸಾರ್ವಜನಿಕರು ತಮ್ಮ ಸ್ವಂತ ಊರುಗಳಿಗೆ ತೆರಳುವುದರಿಂದ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವ್ಯಾಪ್ತಿಯ ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ, ಚಿಕ್ಕೋಡಿ ಮತ್ತು ಬಾಗಲಕೋಟೆ ವಿಭಾಗಗಳಿಂದ ಸುಮಾರು 120 ಹೆಚ್ಚುವರಿ ವಿಶೇಷ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಅಕ್ಟೋಬರ್ 01 ರಂದು ಗುರುವಾರ, ಅಕ್ಟೋಬರ್ 02 ರಂದು ಶುಕ್ರವಾರ, ಗಾಂಧಿ ಜಯಂತಿಯಿರುವುದರಿಂದ ಹಾಗೂ ಅಕ್ಟೋಬರ್ 03 ರಂದು ಶನಿವಾರ, ಅಕ್ಟೋಬರ್ 04 ರಂದು ಭಾನುವಾರ ಇರುವುದರಿಂದ ಬೆಂಗಳೂರು ಮತ್ತು ಇತರೇ ಪ್ರಮುಖ ಸ್ಥಳಗಳಿಂದ ಹೆಚ್ಚಿನ ಪ್ರಯಾಣಿಕರು ತಮ್ಮ ಊರುಗಳಿಗೆ ತೆರಳಲು ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುವುದು. ಬೆಂಗಳೂರಿನಿಂದ ರಾಜ್ಯ ಅಂತರರಾಜ್ಯ ವಿವಿದ ಸ್ಥಳಗಳಿಗೆ ತೆರಳಲು ಅಕ್ಟೋಬರ್ 01 ಹಾಗೂ 02 ರ ವರೆಗೆ ಹೆಚ್ಚುವರಿ ವಿಶೇಷ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಹೆಚ್ಚುವರಿ ಸಾರಿಗೆಗಳ ಸದುಪಯೋಗ ಪಡಿಸಿಕೊಳ್ಳುವದರೊಂದಿಗೆ, ಸುಖಕರ ಹಾಗೂ ಸುರಕ್ಷಿತ ಪ್ರಯಾಣಕ್ಕಾಗಿ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣಿಸುವಂತೆ ಮತ್ತು ವಿಶೇಷ ಹೆಚ್ಚುವರಿ ಸಾರಿಗೆಗಳ ಸದುಪಯೋಗ ಪಡೆದುಕೊಳ್ಳುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸಂಪರ್ಕಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

SATY MITHI
Kannada Daily Morning

# ಹಬ್ಬದ ಸಡಗರದಲ್ಲಿ ಮರೆಯಾಗುವ ಖಾಕಿಯ ಮೌನದ ಕಣ್ಣೀರು

ಬೀದಿ ಬೀದಿಗಳಲ್ಲಿ ಬಣ್ಣಬಣ್ಣದ ವಿದ್ಯುತ್ ದೀಪಗಳ ಸಾಲುಗಳು ಕಣ್ಣಿಗೆ ರಂಗು ತುಂಬುತ್ತಿದ್ದರೆ, ಕಿವಿಯರೆಚುವ ಡಿಜೆ ಸದ್ದು, ಸಕ್ಕರೆ ಮಿಠಾಯಿಗಳ ಹಾಗೂ ಬಿಸಿಬಿಸಿ ಹೋಳಿಗೆಯ ಘಮಲು, ಅಂಗಡಿ ಮುಂಗಟ್ಟುಗಳ ಮುಂದೆ ಮುಗಿಬಿದ್ದ ಜನಜಂಗುಳಿ ಮತ್ತು ಊರ ಮಧ್ಯೆ ಗಾಂಭೀರ್ಯದಿಂದ ಕಂಗೊಳಿಸುವ ಬೃಹತ್ ಗಣೇಶನ ಮೂರ್ತಿಗಳು ಇಡೀ ವಾತಾವರಣವನ್ನೇ ಬದಲಿಸಿಬಿಟ್ಟಿರುತ್ತವೆ. ಇಡೀ ಊರೇ ಗಣಪತಿ ಬಪ್ಪಾ ಮೊರಿಯಾ ಎಂಬ ಮಂತ್ರದಂಡಕ್ಕೆ ತಲೆದೂಗಿ, ಪರಮ ಆನಂದೋತ್ಸಾಹದಲ್ಲಿ ಮಿಂದೆದ್ದಿರುತ್ತದೆ. ಪ್ರತಿಯೊಬ್ಬರ ತುಟಿ ಮೇಲೂ ನಗು ಮೂಡಿರುತ್ತದೆ, ಮನೆಮಂದಿಯೆಲ್ಲಾ ಒಂದೆಡೆ ಸೇರಿ ಹಬ್ಬದೂಟ ಸವಿಯುವ ಖುಷಿಯಲ್ಲಿರುತ್ತಾರೆ. ಜಗತ್ತೇ ಇಂತಹದೊಂದು ಸಂಭ್ರಮದ ಅಲೆಯಲ್ಲಿ ತೇಲಾಡುತ್ತಿರುವ ಈ ಸುಂದರ ಕ್ಷಣದಲ್ಲಿ, ನಿಮ್ಮನ್ನು ಒಂದು ಕ್ಷಣ ನಿಲ್ಲಿಸಿ ಆಳವಾಗಿ ಯೋಚಿಸುವಂತೆ ಮಾಡಲು ಬಯಸುತ್ತೇನೆ. ಆ ಸಮೃದ್ಧ ಹಬ್ಬದ ಕೇಂದ್ರಬಿಂದುವಿನಲ್ಲಿ, ಜನಸಂದಣಿಯ ಕಡಲ ನಡುವೆ, ರಸ್ತೆಯ ಮೂಲೆಮೂಲೆಯಲ್ಲಿ, ಧೂಳು, ಮಳೆ, ಸೆಕೆ ಎನ್ನದೆ ಹಗಲು–ರಾತ್ರಿ ಎನ್ನದೆ ಗಂಟೆಗಟ್ಟಲೆ ಕಲ್ಲುಬಂಡೆಯಂತೆ ಕಾವಲು ಕಾಯುವ ಆ ಖಾಕಿ ಬಣ್ಣದ ಮನುಷ್ಯನ ಮುಖವನ್ನು ಎಂದಾದರೂ ತಾಯಿಯಂತೆ ಕರುಣೆಯಿಂದ ಗಮನಿಸಿದ್ದೀರಾ? ಅವರೇ ನಮ್ಮ ರಕ್ಷಕರು, ನಮ್ಮ ಹೆಮ್ಮೆಯ ಪೊಲೀಸ್ ಸಿಬ್ಬಂದಿ. ನಮಗೆ ಹಬ್ಬವೆಂದರೆ ಜೀವಕ್ಕೆ ಬಿಡುವು, ಮುಖಕ್ಕೆ ಮಂದಹಾಸ; ಆದರೆ ಅದೇ ಹಬ್ಬ ಅವರಿಗೆ ಜೀವ ಹಿಂಡುವ ಕರ್ತವ್ಯದ ಮಹಾಪರೀಕ್ಷೆಯಾಗಿ ಪರಿಣಮಿಸುತ್ತದೆ.

**ದೀಪಗಳ ಬೆಳಕಿನ ಆಚೆಗಿನ ಕತ್ತಲು**

ಸಾಮಾನ್ಯವಾಗಿ ನಮಗೆ ಹಬ್ಬ ಬಂತೆಂದರೆ ಸಾಕು, ಆಫೀಸು ಮತ್ತು ಶಾಲೆಗಳಿಂದ ರಜೆ ಸಿಗುತ್ತದೆ. ತವರು ಮನೆಗೆ ಹೋಗುವುದು, ಬಾಲ್ಯದ ಸ್ನೇಹಿತರೊಂದಿಗೆ ಸೇರಿ ಹರಟೆ ಹೊಡೆಯುವುದು ನಮ್ಮ ವಾಡಿಕೆ. ಆದರೆ, ಒಬ್ಬ ಪೊಲೀಸ್ ಕಾನ್ಸ್ಟೇಬಲ್ ಅಥವಾ ಅಧಿಕಾರಿಗೆ ಹಬ್ಬವೆಂದರೆ ರಜೆಯಿಲ್ಲದ, ನಿದ್ರೆಯಿಲ್ಲದ ನರಕಯಾತನೆ ಎಂದೇ ಹೇಳಬಹುದು. ಗಣೇಶ ಹಬ್ಬವಿರಲಿ, ದೀಪಾವಳಿ ಇರಲಿ ಅಥವಾ ರಂಜಾನ್ ಇರಲಿ, ಜನತೆ ಎಷ್ಟು ಸಂಭ್ರಮದಿಂದ ಹಬ್ಬ ಆಚರಿಸುತ್ತಾರೋ, ಅಷ್ಟು ಹತ್ತು ಪಟ್ಟು ಹೆಚ್ಚು ಆತಂಕ ಮತ್ತು ಎಚ್ಚರಿಕೆಯಿಂದ ಪೊಲೀಸರು ಕಾವಲು ಕಾಯಬೇಕಾಗುತ್ತದೆ. ನೂರಾರು ಜನರಿಗೆ ಹಬ್ಬದ ಖುಷಿ ಹಂಚುವ ಆ ಮನುಷ್ಯ, ತನ್ನ ಸ್ವಂತ ಹೆಂಡತಿ–ಮಕ್ಕಳೊಂದಿಗೆ ಕೂತು ಒಂದು ತುತ್ತು ಹಬ್ಬದ ಅಡುಗೆ ತಿನ್ನುವ ಭಾಗ್ಯದಿಂದ ವಂಚಿತನಾಗಿರುತ್ತಾನೆ. ಮಗು ಹೊಸ ಉಡುಪು ತೊಟ್ಟು, ಅಪ್ಪಾ ಯಾವಾಗ ಮನೆಗೆ ಬರ್ತೀರಾ ಎಂದು ಫೋನ್ ಮಾಡಿ ಹಠ ಮಾಡಿದಾಗ, ಕರ್ತವ್ಯದ ಜಾಗದಲ್ಲೇ ನಿಂತು ಗಂಟಲು ಬಿಗಿದುಕೊಂಡರೂ, ಬರ್ತೀನಿ ಕಣಮ್ಮ ಹಬ್ಬ ಮುಗಿಸಿ ಬರ್ತೀನಿ ಎಂದು ಸುಳ್ಳು ಹೇಳಿ ಫೋನ್ ಕಟ್ ಮಾಡುವ ಆ ತಂದೆಯ ಅಂತರಾಳದ ರೋಧನೆ ಯಾರಿಗಾದರೂ ಕೇಳಿಸೀತೇ?





ಗಣೇಶ ವಿಸರ್ಜನೆ ಅಥವಾ ಮೆರವಣಿಗೆಯ ದಿನಗಳಂತೂ ಅವರಿಗೆ ಅಗ್ನಿಪರೀಕ್ಷೆಯೇ ಸರಿ. ಬೆಳಗಿನ ಜಾವದಿಂದ ಆರಂಭವಾಗಿ ರಾತ್ರಿ ಕಳೆದು ಮುಂಜಾನೆ ತನಕ ಹದಿನೈದರಿಂದ ಹದಿನೆಂಟು ಗಂಟೆಗಳ ಕಾಲ ಕಾಲು ನೋಯುವವರೆಗೆ ನಿಲ್ಲಬೇಕು. ಕುಳಿತುಕೊಳ್ಳಲು ನೆರಳಿಲ್ಲ, ಹೊಟ್ಟೆಗೆ ಸರಿಯಾದ ಸಮಯಕ್ಕೆ ಊಟವಿಲ್ಲ, ಕುಡಿಯಲು ಹನಿ ನೀರಿಲ್ಲ. ಆದರೂ ಮುಖದಲ್ಲಿ ಎಳ್ಳಷ್ಟು ಬೇಸರವಿಲ್ಲದೆ ಕೈಯಲ್ಲಿ ಲಾಠಿ ಹಿಡಿದು ನಿಲ್ಲುವ ಅವರ ಛಲಕ್ಕೆ ಸಾಟಿ ಯಾರೂ ಇಲ್ಲ.

ಗಣೇಶ ಚತುರ್ಥಿಯ ಕೊನೆಯ ದಿನ, ಅಂದರೆ ವಿಗ್ರಹ ವಿಸರ್ಜನೆಯ ರಾತ್ರಿಯಆರೋಚಕತೆಹಾಗೂಉದ್ವಿಗ್ನತೆಸಾಮಾನ್ಯರಕಲ್ಪನೆಗೂಮೀರಿದ್ದು. ಊರೆಲ್ಲಾ ಡೋಲು–ತಾಳಗಳಿಗೆ ತಕ್ಕಂತೆ ಕುಣಿದು ಕುಪ್ಪಳಿಸುತ್ತಿದ್ದರೆ, ಪೊಲೀಸರು ಪ್ರತಿ ಹೆಜ್ಜೆಯ ಮೇಲೂ ಹದ್ದು ಕಣ್ಣಿಟ್ಟಿರುತ್ತಾರೆ. ಕಿಡಿಗೇಡಿಗಳು ಬಂದು ಸಮಾಜದ ಶಾಂತಿ ಕದಡಬಾರದು, ಸಣ್ಣ ಕಿಡಿಯೂ ದೊಡ್ಡ ಕೋಮುಗಲಭೆಯಾಗಿ ಮಾರ್ಪಡಬಾರದು ಎಂದು ಅವರು ತಮ್ಮ ಉಸಿರನ್ನೇ ಬಿಗಿಹಿಡಿದು ಕಾವಲು ಕಾಯುತ್ತಾರೆ. ಆ ಮಹಾಮೇಳದ ದಟ್ಟ ಧೂಳು, ಕಿವಿಕರಗಿಸುವ ಶಬ್ದ ಮಾಲಿನ್ಯ, ನೂಕುನುಗ್ಗಲು–ಇವುಗಳ ಮಧ್ಯೆನಿಂತು ಕರ್ತವ್ಯನಿರ್ವಹಿಸುವುದು ಸುಲಭದ ಮಾತಲ್ಲ. ಮದ್ಯಪಾನ ಮಾಡಿ ಮೈಮರೆತವರನ್ನು ಹದ್ದುಬಸ್ತಿನಲ್ಲಿಡುವುದು, ಟ್ರಾಫಿಕ್ ಜಾಮ್ನಲ್ಲಿ ಸಿಲುಕಿದ ಆಂಬುಲೆನ್ಸ್‌ಗೆ ದಾರಿ ಮಾಡಿಕೊಡುವುದು ನಿಜಕ್ಕೂ ಸಾಹಸವೇ ಸರಿ. ಸೂರ್ಯ ಮೂಡುವವರೆಗೂ ರಸ್ತೆಯಲ್ಲೇ ನಿಂತು ಇಡೀ ಊರಿಗೆ ಸುರಕ್ಷತೆಯ ಕವಚವಾಗುವ ಇವರ ಶ್ರಮಕ್ಕೆ ಬೆಲೆ ಕಟ್ಟಲು ಸಾಧ್ಯವೇ? ನಾವು ಪೊಲೀಸರನ್ನು ನೋಡಿದಾಗ ಕೇವಲ ಅವರ ಮೇಲಿರುವ ಖಾಕಿ ಬಟ್ಟೆ, ಶೂಗಳು ಮತ್ತು ಗತ್ತಿನ ದಂಡನೆ ಮಾತ್ರ ನಮ್ಮ ಕಣ್ಣಿಗೆ ರಾಚುತ್ತದೆ. ಆದರೆ ಆ ಖಾಕಿ ಬಟ್ಟೆಯೊಳಗೆ ಬಡತನ, ನೋವು, ಕಣ್ಣೀರು ಮತ್ತು ಜವಾಬ್ದಾರಿಗಳಿಂದ ಕೂಡಿದ ಒಬ್ಬ ಹಸಿ ಹಸಿ ಮನುಷ್ಯ ಇರುತ್ತಾನೆ. ಆತನ ಮನೆಯಲ್ಲೂ ವೃದ್ಧ ತಂದೆ–ತಾಯಿಯರ ಅನಾರೋಗ್ಯವಿರುತ್ತದೆ, ಶಾಲೆಗೆ ಹೋಗುವ ಮಕ್ಕಳ ಫೀಸ್ ಕಟ್ಟುವ ಚಿಂತೆಯಿರುತ್ತದೆ. ತಮ್ಮ ಸ್ವಂತ ಮನೆಯಲ್ಲಿ ಯಾವುದಾದರೂ ತುರ್ತು ಪರಿಸ್ಥಿತಿ ಬಂದಿದ್ದರೂ, ಕರ್ತವ್ಯದ ಕರೆ ಬಂದ ತಕ್ಷಣ ಎಲ್ಲವನ್ನೂ ಕಣ್ಣೀರಿನ ಜೊತೆ ನುಂಗಿ ಬಂದು ಜನರ ರಕ್ಷಣೆಗೆ ನಿಲ್ಲುವ ಅವರ ತ್ಯಾಗ ಮನೋಭಾವ ಅನನ್ಯ. ಹಬ್ಬದ ರಾತ್ರಿ ಹೆಂಡತಿ ಮಾಡಿದ ಬಿಸಿಯಾದ ಹೋಳಿಗೆಯನ್ನು ನೆನೆಯುತ್ತಾ, ರಸ್ತೆಯಲ್ಲಿ ಪೆಟ್ರೋಲಿಂಗ್ ಮಾಡುವ ಜೀಪಿನ ಸದ್ದು ಕೇಳುತ್ತಾ ಸಮಯ ಕಳೆಯುವ ಅವರ ಒಂಟಿತನ ಅದೆಷ್ಟು ನೋವಿನಿಂದ ಕೂಡಿರುತ್ತದೆ ಒಮ್ಮೆ ಊಹಿಸಿ!

ಪೊಲೀಸರು ಕೇವಲ ಕಾನೂನು ಪಾಲಕರು ಮಾತ್ರವಲ್ಲ, ಅನೇಕ ಸಂದರ್ಭಗಳಲ್ಲಿ ಅವರೇ ಅಪ್ಪಟ ಮಾನವೀಯತೆಯ ಪ್ರತೀಕ. ಹಬ್ಬದ ನೂಕುನುಗ್ಗಲಿನಲ್ಲಿ ದಾರಿತಪ್ಪಿ ಅಳುತ್ತಿದ್ದ ಕಂದಮ್ಮನನ್ನು ಪಾಲಕರಿಗೆ ಸೇರಿಸುವುದರಿಂದ ಹಿಡಿದು, ವೃದ್ಧರಿಗೆ ಜೀವದ ಹಂಗು ತೊರೆದು ರಸ್ತೆ ದಾಟಿಸಲುಸಹಾಯಮಾಡುವವರೆಗೆಅವರುಎಷ್ಟೋಸತ್ಕಾರ್ಯಗಳನ್ನು ಮಾಡುತ್ತಿರುತ್ತಾರೆ. ಆದರೆ ವಿಪರ್ಯಾಸವೆಂದರೆ, ಇವರ ಈ ಒಳ್ಳೆಯ ಕೆಲಸಗಳು ಯಾವತ್ತೂ ಮುಖಪುಟದಲ್ಲಿ ಸುದ್ದಿಯಾಗುವುದಿಲ್ಲ. ಬದಲಿಗೆ ಎಲ್ಲಾದರೂ ಒಂದು ಸಣ್ಣ ಲೋಪವಾದರೆ, ಅಥವಾ ಕಾನೂನು ಸುವ್ಯವಸ್ಥೆ ಕಾಪಾಡಲುಲಘುವಾಗಿಲಾಠಿಬೀಸಬೇಕಾದಪ್ರಸಂಗಬಂದರೆಸಾಕು, ಇಡೀ ಪೊಲೀಸ್ ವ್ಯವಸ್ಥೆಯನ್ನು ಜಾಲತಾಣಗಳಲ್ಲಿ ಹಿಗ್ಗಾಮುಗ್ಗಾ ಟೀಕಿಸಲು ಜನ ಮುನ್ನುಗ್ಗುತ್ತಾರೆ. ಈ ಅನ್ಯಾಯದ ನಿಂದನೆಗಳ ನಡುವೆಯೂ ಕಿಂಚಿತ್ತೂ ಕರ್ತವ್ಯ ಚ್ಯುತಿ ತೋರದೆ ಮತ್ತೆ ಮತ್ತೆ ನಮ್ಮ ಸೇವೆಗೆ ನಿಲ್ಲುವ ಅವರ ವೃತ್ತಿಧರ್ಮ ನಿಜಕ್ಕೂ ವಿಸ್ಮಯಕಾರಿಯಾದದ್ದು. ಹಬ್ಬಗಳು ಬಂದು ಹೋಗುತ್ತವೆ, ಆದರೆ ಪೊಲೀಸರ ಕಾವಲು ಎಂದೆಂದಿಗೂ ನಿರಂತರ. ನಾವುಒಂದುದಿನಹಬ್ಬಆಚರಿಸಿ ಮರೆತುಬಿಡಬಹುದು, ಆದರೆ ಅವರು ಇಡೀ ವರ್ಷ, ಹಗಲು–ರಾತ್ರಿ ಎನ್ನದೆ ತಮ್ಮ ನೆಮ್ಮದಿಯನ್ನು, ಹಬ್ಬದ ಸಂಭ್ರಮವನ್ನು ಜನಸಾಮಾನ್ಯರಿಗಾಗಿ ಬಲಿ ಕೊಡುತ್ತಾರೆ. ಮುಂದಿನ ಬಾರಿ ನೀವು ಯಾವುದೇ ಹಬ್ಬದ ಸಂದರ್ಭದಲ್ಲಿ ರಸ್ತೆಯ ಮೂಲೆಮೂಲೆಯಲ್ಲಿ ನಿಂತಿರುವ ಪೊಲೀಸರನ್ನು ಕಂಡಾಗ, ದ್ವೇಷದಿಂದಲ್ಲ, ಒಂದು ಕೃತಜ್ಞತಾಪೂರ್ವಕ ಮುಗುಳ್ನಗುವಿನೊಂದಿಗೆ ನೋಡಿ. ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಅವರ ಕೆಲಸಕ್ಕೆ ಅಡ್ಡಿಪಡಿಸದೆ ಸಹಕರಿಸಿ. ಅದೇ ನೀವು ಅವರಿಗೆ ನೀಡುವ ಅತ್ಯಮುತ್ತಮ ಉಡುಗೊರೆ. ನಮ್ಮ ಸುರಕ್ಷತೆಯೇ ಅವರ ಹಬ್ಬ, ನಮ್ಮ ಮುಖದ ನಗುವೇ ಅವರ ಅತಿ ದೊಡ್ಡ ಸಂಭ್ರಮ. ಖಾಕಿಯ ಈ ಮೌನ ತ್ಯಾಗಕ್ಕೆ ಪ್ರತಿಯಾಗಿ ನಾವು ಅವರಿಗೆ ನೀಡಬೇಕಾಗಿರುವುದು ಕೇವಲ ಭಯವಲ್ಲ; ಬದಲಿಗೆ ಅಪಾರ ಗೌರವ, ಅಕ್ಕರೆ ಮತ್ತು ಸಹಕಾರ. ಏಕೆಂದರೆ, ಅವರು ನಮಗಾಗಿ ತಮ್ಮ ಹಬ್ಬದ ಬೆಳಕನ್ನು ಕತ್ತಲಲ್ಲಿ ಕಳೆದುಕೊಳ್ಳುತ್ತಿದ್ದಾರೆ. ಆ ಮೌನ ಮಹಾಕಾವ್ಯಕ್ಕೆ ನಮ್ಮದೊಂದು ಸಾರ್ಥಕ ನಮನ ಸಲ್ಲಿಸೋಣ.



**ಶ್ರೀಧರ ದೊಡಮನಿ,**
**ಯುವ ಸಾಹಿತಿ,**
**ಗದಗ ಜಿಲ್ಲೆ**

## ಶರಣ ಹೂಗಾರ ಮಾದಯ್ಯರ ಜಯಂತಿ ಭಕ್ತಿಪೂರ್ವಕ ಆಚರಣೆ

**ಯಲಬುರ್ಗಾ:** ಬಸವಾದಿ ಶಿವಶರಣರಲ್ಲಿ ಪ್ರಮುಖರಾದ ಶರಣ ಹೂಗಾರ ಮಾದಯ್ಯರ ಜಯಂತಿಯನ್ನು ತಾಲೂಕಿನ ಗುಳೆ ಗ್ರಾಮದಲ್ಲಿ ಭಕ್ತಿಪೂರ್ವಕವಾಗಿ ಆಚರಿಸಲಾಯಿತು.

ಗ್ರಾಮದ ಶರಣ ದಂಪತಿಗಳಾದ ಬಸಮ್ಮ ಹಾಗೂ ಬಸವರಾಜ ಹೂಗಾರ ಅವರ ಪುತ್ರ ಕುಮಾರ ಶರಣು ಹೂಗಾರ ಅವರು ತಮ್ಮ ಕುಲಗುರುಗಳಾದ ಶರಣ ಹೂಗಾರ ಮಾದಯ್ಯರ ಜಯಂತಿಯನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಗಮನ ಸೆಳೆದರು.

ಶರಣಹೂಗಾರಮಾದಯ್ಯರಭಾವಚಿತ್ರವನ್ನು ಪ್ರತಿಷ್ಠಾಪಿಸಿ, ಅಷ್ಟವಿಧಾರ್ಚನೆ ಹಾಗೂ ಷೋಡಶೋಪಚಾರ ವಿಧಾನದಂತೆ ಪೂಜಾ ಕಾರ್ಯಕ್ರಮ ನೆರವೇರಿಸಿದರು. ಅತ್ಯಂತ ಶ್ರದ್ಧೆ, ಭಕ್ತಿ ಹಾಗೂ ಭಾವಪೂರ್ಣ ವಾತಾವರಣದಲ್ಲಿ ಪೂಜೆ ಸಲ್ಲಿಸಿ, ತಮ್ಮ ಕುಲಗುರುಗಳಿಗೆ ಗೌರವ ಹಾಗೂ ಶರಣು ಸಮರ್ಪಿಸಿದರು.

ಬಸವಾದಿ ಶಿವಶರಣರು ಸಾರಿದ ಸಮಾನತೆ, ಕಾಯಕ, ದಾಸೋಹ, ಸತ್ಯ, ನಿಷ್ಠೆ ಹಾಗೂ ಮಾನವೀಯ ಮೌಲ್ಯಗಳನ್ನು ಸ್ಮರಿಸುವ ನಿಟ್ಟಿನಲ್ಲಿ ಇಂತಹ ಆಚರಣೆಗಳು ಮಹತ್ವ ಪಡೆದಿವೆ. ಶರಣ ಹೂಗಾರ ಮಾದಯ್ಯರ ತತ್ವ–ಆದರ್ಶಗಳನ್ನು ಸ್ಮರಿಸುತ್ತಾ ಅವರ ಜಯಂತಿಯನ್ನು ಆಚರಿಸಿರುವ ಶರಣು ಹೂಗಾರ ಅವರ ಕಾರ್ಯವು ಶರಣ ಸಂಸ್ಕೃತಿ ಹಾಗೂ ಪರಂಪರೆಯ ಮೇಲಿನ ಗೌರವಕ್ಕೆ ಸಾಕ್ಷಿಯಾಗಿದೆ.



ತಮ್ಮ ಕುಲಗುರುಗಳ ಮೇಲಿನ ಅಪಾರ ಭಕ್ತಿ ಮತ್ತು ಶ್ರದ್ಧೆಯಿಂದ ಪೂಜೆ ನೆರವೇರಿಸಿ ಜಯಂತಿಯನ್ನು ಆಚರಿಸಿದ ಶರಣು ಹೂಗಾರ ಅವರ ಭಕ್ತಿಭಾವ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ. ಶರಣ ಹೂಗಾರ ಮಾದಯ್ಯರ ಆಶೀರ್ವಾದದಿಂದ ಶರಣು ಹೂಗಾರ ಹಾಗೂ ಅವರ ಕುಟುಂಬಕ್ಕೆ ಸುಖ, ಶಾಂತಿ, ಸಮೃದ್ಧಿ ದೊರೆಯಲಿ ಎಂದು ಹಾರೈಸಲಾಯಿತು.

ಶರಣ ಹೂಗಾರ ಮಾದಯ್ಯ ಶರಣರ ತತ್ವ–ಆದರ್ಶಗಳು ಸಮಾಜಕ್ಕೆ ಸದಾ ದಾರಿದೀಪವಾಗಲಿ ಎಂಬ ಆಶಯದೊಂದಿಗೆ ಜಯಂತಿಯನ್ನು ಭಕ್ತಿಪೂರ್ವಕವಾಗಿ ಆಚರಿಸಲಾಯಿತು.

## ಸೆ.29ರಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ನಿವಾಸದ ಮುಂದೆ ಧರಣಿ

### ರೈತ ಸಂಘ ನಿರ್ಧಾರ | ಸಂಘಟನೆಯ ತಾಲೂಕು ಅಧ್ಯಕ್ಷ ಈಶಪ್ಪ ವಕ್ರ ಮಾಹಿತಿ

**ಯಲಬುರ್ಗಾ:** ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ವತಿಯಿಂದ ರೈತರ ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸೆ.28ರಂದು ಹಳ್ಳಿಯಿಂದ ಹುಬ್ಬಳ್ಳಿ ಚಲೋ ಹೋರಾಟವನ್ನು ಹಮ್ಮಿಕೊಳ್ಳಲಾಗಿದ್ದು, ಕೇಂದ್ರ ಸಚಿವ ಪ್ರಹ್ಲಾದ ಜೋಶಿ ನಿವಾಸದ ಮುಂದೆ ಧರಣಿ ನಡೆಸಲಾಗುವುದು ಎಂದು ರಾಜ್ಯ ರೈತ ಸಂಘದ ತಾಲೂಕು ಅಧ್ಯಕ್ಷ ಈಶಪ್ಪ ವಕ್ರ ತಿಳಿಸಿದ್ದಾರೆ.

ಈ ಕುರಿತು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಡಾ.ಎಂ.ಎಸ್.ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಬೇಕು. ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಸಿ2+50% ಆಧಾರದ ಮೇಲೆ ಕಾನೂನುಬದ್ಧ ಕನಿಷ್ಠ ಬೆಂಬಲ ಬೆಲೆ ಖಾತರಿಪಡಿಸಬೇಕು. ಸಕ್ಕರೆಗೆ ಕನಿಷ್ಠ 60 ರೂ. ಕೆಜಿ ಬೆಂಬಲ ಬೆಲೆ ನಿಗದಿಪಡಿಸಬೇಕು. ರೈತರ ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ದೊರೆಯುವಂತೆ ಕೇಂದ್ರ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ರೈತರ ಬದುಕು, ಕೃಷಿಯ ಭವಿಷ್ಯ ಹಾಗೂ ಆಹಾರ ಭದ್ರತೆಯ ದೃಷ್ಟಿಯಿಂದ ಈ ಬೇಡಿಕೆಗಳು ಅತ್ಯಂತ ಮಹತ್ವದ್ದಾಗಿವೆ ಎಂದು ತಿಳಿಸಿದರು. ಈ ಒಂದು ಪ್ರತಿಭಟನೆಗೆ ರಾಜ್ಯದ ವಿವಿಧ ಜಿಲ್ಲೆ, ತಾಲೂಕಿನ ಮೂಲೆ ಮೂಲೆಗಳಿಂದ ರೈತರು ಆಗಮಿಸಲಿದ್ದಾರೆ. ಯಲಬುರ್ಗಾ ತಾಲೂಕಿನ ವಿವಿಧ ಹಳ್ಳಿಗಳಿಂದ ಹೆಚ್ಚಿನ ಸಂಖ್ಯೆಯ ರೈತರು ಆಗಮಿಸಿ "ಹಳ್ಳಿಯಿಂದ ಹುಬ್ಬಳ್ಳಿ ಚಲೋ" ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಸಂಘಟನೆಯ ತಾಲೂಕು ಕಾರ್ಯದರ್ಶಿ ಮಹೇಶ ನೇಲಜೇರಿ ಹಾಗೂ ತಾಲೂಕು ಹಸಿರು ಶಾಲು ಸಂಚಾಲಕ ಕುಂಟೆಪ್ಪ ಯಡ್ಡೋಣಿ, ಮಹೇಶ ಮಾಲಿಪಾಟೀಲ್, ನಿಂಗರಾಜ ಹಂಚಿನಾಳ, ಯಮನೂರಪ್ಪ ಕಂಬಾರ, ಧರ್ಮಣ್ಣ ತಲ್ಲೂರು, ಮಂಜುನಾಥ ಉಚ್ಚಲಕುಂಟಿ, ಬಸವರಾಜ ಈಳಿಗೇರ್, ದಸ್ತಗಿರಿಸಾಬ ಕಂಠಿ ತಿಳಿಸಿದ್ದಾರೆ.



## ಮಹಿಳೆಯರಿಗೆ ಧಾರ್ಮಿಕ, ಆಧ್ಯಾತ್ಮಿಕ ಸಮಾನತೆ ತಂದುಕೊಟ್ಟ ಬಸವಣ್ಣ:ವಿರತೀಶಾನಂದ ಸ್ವಾಮೀಜಿ

**ಯಲಬುರ್ಗಾ:** ಇಷ್ಟಲಿಂಗ ದೀಕ್ಷೆಯ ಸಮಯದಲ್ಲಿ ಗುರುವು ಶಿಷ್ಯನ 'ಸಂಚಿತ ಕರ್ಮ' ಹಿಂದಿನ ಜನ್ಮಗಳ ಪಾಪ–ಪುಣ್ಯ ಮತ್ತು 'ಪ್ರಾರಬ್ಧ ಕರ್ಮ'ಗಳನ್ನು ನಾಶಪಡಿಸುತ್ತಾನೆ ಎಂಬ ಭಾವನೆಯಿದೆ ಎಂದು ಮನಗುಳಿಯ ವಿರಕ್ತಮಠದ ಶ್ರೀ ವಿರತೀಶಾನಂದ ಸ್ವಾಮೀಜಿ ಹೇಳಿದರು.

ತಾಲೂಕಿನ ವನಜಭಾವಿ ಗ್ರಾಮದ ಶರಣ ದೇವಪ್ಪ ಕೋಳೂರು ಮನೆಯಲ್ಲಿ ಏರ್ಪಡಿಸಿದ್ದ ಇಷ್ಟಲಿಂಗ ದೀಕ್ಷೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಮನಸ್ಸು ಶುದ್ಧವಾಗಿಸಿಕೊಂಡು ಮಾಡುವ ನಿತ್ಯ ಪೂಜೆಯು ವ್ಯಕ್ತಿಯಲ್ಲಿ ಜಾಗೃತಿ, ಶಾಂತಿ ಮತ್ತು ಆಧ್ಯಾತ್ಮಿಕ ಬಲವನ್ನು ತುಂಬಿ, ಕರ್ಮದ ಪ್ರಭಾವದಿಂದ ಬಿಡುಗಡೆ ನೀಡುತ್ತದೆ. 12ನೇ ಶತಮಾನದಲ್ಲಿ ಬಸವಣ್ಣನವರು ಸ್ತ್ರೀ ಸಮಾನತೆ ಮತ್ತು ಸ್ವಾತಂತ್ರ್ಯಕ್ಕಾಗಿ ಕ್ರಾಂತಿಕಾರಿ ಹೆಜ್ಜೆಗಳನ್ನು ಇಟ್ಟಿದ್ದಾರೆ. ಸ್ತ್ರೀಯರಿಗೆ ಅವರು ನೀಡಿದ ಸ್ವಾತಂತ್ರ್ಯ ಮತ್ತು ಹಕ್ಕುಗಳು ಅವರ ವಚನ ಚಳವಳಿಯ ಪ್ರಮುಖ ಭಾಗವಾಗಿದ್ದವು.

ಅಂದಿನ ಕಾಲದಲ್ಲಿ ಧಾರ್ಮಿಕ ಹಕ್ಕುಗಳಿಂದ ವಂಚಿತರಾಗಿದ್ದ ಮಹಿಳೆಯರಿಗೆ ಇಷ್ಟಲಿಂಗ ದೀಕ್ಷೆಯ ಮೂಲಕ ಧಾರ್ಮಿಕ ಮತ್ತು ಆಧ್ಯಾತ್ಮಿಕ ಸಮಾನತೆ ತಂದುಕೊಟ್ಟರು. ಸ್ತ್ರೀಯರಿಗೂ ಪುರುಷರಷ್ಟೇ ಮೋಕ್ಷದ ಹಕ್ಕಿದೆ ಎಂದು ಸಾರಿದ್ದಾರೆ ಎಂದರು.

ಅನುಭವ ಮಂಟಪದಲ್ಲಿ ಸಮಾನ ಪೀಠ ಜಗತ್ತಿನ ಪ್ರಥಮ ಸಂಸತ್ ಎನ್ನಲಾದ 'ಅನುಭವ ಮಂಟಪ'ದಲ್ಲಿ ಮಹಿಳೆಯರಿಗೆ ಮುಕ್ತವಾಗಿ ಭಾಗವಹಿಸುವ, ವಾದ–ಸಂವಾದ ಮಾಡುವ ಮತ್ತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವ ಪೂರ್ಣ ಸ್ವಾತಂತ್ರ್ಯವಿತ್ತು.

ಅಕ್ಕಮಹಾದೇವಿ ಮತ್ತು ಇತರ ಶರಣೆಯರು ಬಸವಣ್ಣನವರ ವೈಚಾರಿಕ ಕ್ರಾಂತಿಯಿಂದಾಗಿಯೇ ಅಕ್ಕಮಹಾದೇವಿ, ನೀಲಾಂಬಿಕೆ, ಅಕ್ಕನಾಗಮ್ಮ, ಮುಕ್ತಾಯಕ್ಕ, ಸೂಳೆ ಸಂಕವ್ವ ಮುಂತಾದ 30ಕ್ಕೂ ಹೆಚ್ಚು ಶರಣೆಯರು ವಚನಗಳನ್ನು ರಚಿಸಿ, ತಮ್ಮದೇ ಆದ ಆಧ್ಯಾತ್ಮಿಕ ಎತ್ತರವನ್ನು ತಲುಪಲು ಸಾಧ್ಯವಾಯಿತು ಎಂದರು.

ನಿವೃತ್ತ ಪಿಎಸ್ಐ ಬಸನಗೌಡ ಪೊಲೀಸ್ ಪಾಟೀಲ್ ಹಾಗೂ ರಾಷ್ಟ್ರೀಯ ಬಸವದಳ ಕಾರ್ಯದರ್ಶಿ ಬಸವರಾಜ ಹೂಗಾರ ಮಾತನಾಡಿ, ಪ್ರತಿಯೊಬ್ಬ ವ್ಯಕ್ತಿ ಅಥವಾ ಸಾಧಕನು ಭೌತಿಕ ಪ್ರಪಂಚದ ಕಾಲ, ಸಮಯ ಮತ್ತು ಮೃತ್ಯುವಿನ ಭಯದಿಂದ ಮುಕ್ತನಾಗಿ ಅಮರವಾದ ಲಿಂಗಾಂಗ ಸಾಮರಸ್ಯದ ಅನುಭವ ಪಡೆಯುತ್ತಾನೆ ಎಂದು ತಿಳಿಸಿದರು.

ವನಜಭಾವಿ ರಾಷ್ಟ್ರೀಯ ಬಸವದಳ ಗೌರವಾಧ್ಯಕ್ಷ ದೇವಪ್ಪ ಕೋಳೂರು ಮಾತನಾಡಿ, ಇಷ್ಟಲಿಂಗ ದೀಕ್ಷೆಯಿಂದ ಮನುಷ್ಯನಲ್ಲಿರುವ ಅಜ್ಞಾನ ತೊರೆದು, ಕಾಯಕ, ದಾಸೋಹ ಮತ್ತು ಸದಾಚಾರದ ಮೂಲಕ ಶಿವ ಸಾಕ್ಷಾತ್ಕಾರವನ್ನು ಪಡೆಯುವ ಮಾರ್ಗ ತೋರಿಸುತ್ತದೆ.

ದಿನನಿತ್ಯ ಶ್ರದ್ಧೆ ಮತ್ತು ನಿಷ್ಠೆಯಿಂದ ಇಷ್ಟಲಿಂಗ ಪೂಜೆ ಮಾಡುವುದರಿಂದ ಭಯ ದೂರವಾಗಿ ಭಕ್ತಿ ಮನೆ ಮಾಡುತ್ತದೆ ಎಂದರು.

ಮರಕಟ್ ಬಸವಕೇಂದ್ರದ ಅಧ್ಯಕ್ಷ ಅಮರೇಶಪ್ಪ ಬಳ್ಳಾರಿ ಮಾತನಾಡಿ, ಇಂದಿನ ದಿನಗಳಲ್ಲಿ ಮನುಷ್ಯನು ಭಯದ ಭಾವನೆಯಲ್ಲಿ ಬದುಕು ನಡೆಸುತ್ತಿದ್ದಾನೆ. ಇದನ್ನು ಹೋಗಲಾಡಿಸಲು ನಿತ್ಯ ಲಿಂಗಪೂಜೆಯಿಂದ ಭಕ್ತಿ ಮಾರ್ಗಕ್ಕೆ ಬರಲು ಸಾಧ್ಯವಾಗುತ್ತದೆ ಎಂದರು.

ದೇವಪ್ಪ ಕೋಳೂರು ಅವರ ಧರ್ಮಪತ್ನಿ ನೀಲಮ್ಮ ಕೋಳೂರು ಇವರಿಗೆ ಲಿಂಗದೀಕ್ಷೆ ಮತ್ತು ಗರ್ಭಲಿಂಗ ಧಾರಣೆ ಕಾರ್ಯಕ್ರಮ ಜರುಗಿತು. ಎಂಬಿಬಿಎಸ್ ಪದವಿ ಪಡೆಯಲು ಆಯ್ಕೆಯಾದ ಹಿರೇವಂಕಲಕುಟಾದ ವಿದ್ಯಾರ್ಥಿಗಳಿಗೆ ಗೌರವಿಸಲಾಯಿತು.

ಈ ಸಂದರ್ಭ ವನಜಭಾವಿ ರಾಷ್ಟ್ರೀಯ ಬಸವದಳ ಮಲ್ಲಪ್ಪ ಪರಂಗಿ, ಪ್ರಮುಖರಾದ ಚಿದಾನಂದಪ್ಪ ಗೊಂದಿ, ವಿರೂಪಾಕ್ಷಪ್ಪ ಮೇಟಿ, ಹನುಮಂತಪ್ಪ ಮೇಟಿ, ಭೀಮನಗೌಡ ಗೌಡ್ರು, ಅಮರೇಶ ಹೋಟೆಲ್, ಚನ್ನಬಸಪ್ಪ ಮೇಟಿ, ಶರಣಪ್ಪ ಗೊಂದಿ, ನಿಂಗಪ್ಪ ಪರಂಗಿ, ಯಲ್ಲಪ್ಪ, ಮತ್ತು ಅಕ್ಕನ ಬಳಗದ ಶರಣ ಯಮನಮ್ಮ ಗೌಡ್ರು, ಸಾವಿತ್ರಮ್ಮ ಆವಾರಿ, ನಾಗಮ್ಮ ಜಾಲಿಹಾಳ, ಕೋಳೂರು ಕುಟುಂಬದವರು, ನಾಗನಗೌಡ ಜಾಲಿಹಾಳ, ಯಮನೂರಪ್ಪ ಬೇವೂರು ಮನ್ನಾಪುರ, ಕಲ್ಲಪ್ಪ ಚೌಡಾಪುರ, ಬಸವರಾಜ ತಾಳಕೇರಿ, ಹನುಮಗೌಡ ಬಳ್ಳಾರಿ, ರೇವಣಪ್ಪ ಮತ್ತಿ, ಚಿದಾನಂದಪ್ಪ ಹೊಸಳ್ಳಿ, ನಿಜಲಿಂಗಪ್ಪ ಮಂತ್ರಿ, ಹನುಮೇಶ ಹೊಸಳ್ಳಿ ಸೇರಿದಂತೆ ಮತ್ತಿತರರು ಇದ್ದರು.



SATYAMITHI KANNADA DAILY MORNING OWNER, PUBLISHER, BY: CHANNAVEERAPPA NINGAPPA SAMAGANDI PUBLISHED FROM: KELAGAL{ETH, NEAR BASAVESHWAR DEVASTAN, HOME NO. 169, WARD NO, 4 MAIN ROAD GAJEDRAGAD, GADAG KARNATAKA - 582114 PRINTED AT: MAILARALINGESHWAR PRINTERS, WARD NO, 3, SUDI TQ, GAJENDRAGAD, GADAG, KARNATAKA- 582114